# ಪ್ರತ್ಯರ್ಪಣ ಅಧಿನಿಯಮ, 1962

(1962ರ ಅಧಿನಿಯಮ ಸಂಖ್ಯೆ 34)

**[9-5-2003ರ ಭಾರತ ರಾಜಪತ್ರದ IX ನೇ ಭಾಗದ, Iನೇ ವಿಭಾಗದ, 24ನೇ ಸಂಪುಟದ 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 46 ರಿಂದ 54ರ ವರೆಗಿನ ಪುಟಗಳಲ್ಲಿ ಪ್ರಕಟಿತ]**

**ವಿಷಯಾನುಕ್ರಮಣಿಕೆ**

**ಪ್ರಕರಣಗಳು:**

**ಅಧ್ಯಾಯ - I**
**ಪ್ರಾರಂಭಿಕ**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ಅಧಿನಿಯಮದ ಅನ್ವಯ

**ಅಧ್ಯಾಯ - II**

**IIIನೇ ಅಧ್ಯಾಯವು ಅನ್ವಯವಾಗದಿರುವ ವಿದೇಶಿ ರಾಜ್ಯಗಳಿಗೆ**

**ಪರಾರಿ ಅಪರಾಧಿಗಳ ಪ್ರತ್ಯರ್ಪಣ**

4. ವಶಕ್ಕೆ ಒಪ್ಪಿಸಲು ಕೋರಿಕೆ
5. ಮ್ಯಾಜಿಸ್ಟ್ರೇಟನಿಂದ ವಿಚಾರಣೆಗಾಗಿ ಆದೇಶ
6. ದಸ್ತಗಿರಿ ವಾರಂಟನ್ನು ಹೊರಡಿಸುವುದು
7. ಮ್ಯಾಜಿಸ್ಟ್ರೇಟನ ಮುಂದೆ ಪ್ರಕ್ರಿಯೆ
8. ಪರಾರಿ ಅಪರಾಧಿಯನ್ನು ವಶಕ್ಕೆ ಒಪ್ಪಿಸುವುದು
9. ಕೆಲವು ಪ್ರಕರಣಗಳಲ್ಲಿ ದಸ್ತಗಿರಿ ವಾರಂಟುಗಳನ್ನು ಹೊರಡಿಸಲು ಮ್ಯಾಜಿಸ್ಟ್ರೇಟನ ಅಧಿಕಾರ
10. ನಿಶಾನೆಗಳು, ಸಾಕ್ಷಿದಾರರ ಹೇಳಿಕೆಗಳು ಮತ್ತು ಇತರ ದಸ್ತಾವೇಜುಗಳನ್ನು ಸಾಕ್ಷ್ಯದಲ್ಲಿ ಸ್ವೀಕರಿಸುವುದು ಮತ್ತು ಅವುಗಳ ಅಧಿಪ್ರಮಾಣೀಕರಣ ನಿಶಾನೆಗಳು, ಸಾಕ್ಷಿದಾರರ ಹೇಳಿಕೆಗಳು ಮತ್ತು ಇತರ ದಸ್ತಾವೇಜುಗಳನ್ನು ಸಾಕ್ಷ್ಯದಲ್ಲಿ ಸ್ವೀಕರಿಸುವುದು ಮತ್ತು ಅವುಗಳ ಅಧಿಪ್ರಮಾಣೀಕರಣ
11. ಈ ಅಧ್ಯಾಯವು IIIನೇ ಅಧ್ಯಾಯವು ಅನ್ವಯವಾಗುವಂಥ ವಿದೇಶೀ ರಾಜ್ಯಗಳಿಗೆ ಅನ್ವಯವಾಗತಕ್ಕದ್ದಲ್ಲ. ಈ ಅಧ್ಯಾಯವು IIIನೇ ಅಧ್ಯಾಯವು ಅನ್ವಯವಾಗುವಂಥ ವಿದೇಶೀ ರಾಜ್ಯಗಳಿಗೆ ಅನ್ವಯವಾಗತಕ್ಕದ್ದಲ್ಲ.

**ಅಧ್ಯಾಯ - III**

**ಪರಾರಿ ಅಪರಾಧಿಗಳನ್ನು ಪ್ರತ್ಯರ್ಪಣ ವ್ಯವಸ್ಥೆಗಳನ್ನು ಹೊಂದಿರುವ ವಿದೇಶಿ ರಾಜ್ಯಗಳಿಗೆ ಹಿಂದಿರುಗಿಸುವುದು**

12. ಅಧ್ಯಾಯದ ಅನ್ವಯಅಧ್ಯಾಯದ ಅನ್ವಯ

13. ವಿದೇಶಿ ರಾಜ್ಯಗಳಿಂದ ಪರಾರಿ ಅಪರಾಧಿಗಳು ದಸ್ತಗಿರಿಯಾಗುವುದಕ್ಕೆ ಮತ್ತು ಹಿಂತಿರುಗಿಸುವಿಕೆಗೆ ಗುರಿಯಾಗುವುದುವಿದೇಶಿ ರಾಜ್ಯಗಳಿಂದ ಪರಾರಿ ಅಪರಾಧಿಗಳು ದಸ್ತಗಿರಿಯಾಗುವುದಕ್ಕೆ ಮತ್ತು ಹಿಂತಿರುಗಿಸುವಿಕೆಗೆ ಗುರಿಯಾಗುವುದು

14. ಹಿಂಬರಹ ಮಾಡಿದ ಮತ್ತು ತಾತ್ಕಾಲಿಕ ವಾರಂಟುಗಳು

15. ಪರಾರಿ ಅಪರಾಧಿಯ ದಸ್ತಗಿರಿಗಾಗಿ ಹಿಂಬರಹ ಮಾಡಿದ ವಾರಂಟು

16. ಪರಾರಿ ಅಪರಾಧಿಯ ದಸ್ತಗಿರಿಗಾಗಿ ತಾತ್ಕಾಲಿಕ ವಾರಂಟು

17. ದಸ್ತಗಿರಿ ಮಾಡಿದಾಗ ಪರಾರಿ ಅಪರಾಧಿಯೊಂದಿಗೆ ವ್ಯವಹರಿಸುವುದು

18. ಪರಾರಿ ಅಪರಾಧಿಯನ್ನು ವಾರಂಟಿನ ಮೂಲಕ ಹಿಂತಿರುಗಿಸುವುದು

## ಅಧ್ಯಾಯ – IV

### ವಿದೇಶಿ ರಾಜ್ಯಗಳಿಂದ ಆಪಾದಿತ ಅಥವಾ ಅಪರಾಧಿ ಎಂದು ನಿರ್ಣೀತರಾದ ವ್ಯಕ್ತಿಗಳನ್ನು ವಶಕ್ಕೆ ಒಪ್ಪಿಸುವುದು ಅಥವಾ ಹಿಂದಿರುಗಿಸುವುದು

19. ವಿದೇಶೀ ರಾಜ್ಯದಲ್ಲಿ ಇರುವ ಆಪಾದಿತ ಅಥವಾ ಅಪರಾಧಿ ಎಂದು ನಿರ್ಣೀತನಾದ ವ್ಯಕ್ತಿಯನ್ನು ಭಾರತಕ್ಕೆ ಒಪ್ಪಿಸುವುದು ಅಥವಾ ಹಿಂತಿರುಗಿಸುವುದಕ್ಕಾಗಿ ಕೋರಿಕೆಯ ವಿಧಾನ ಅಥವಾ ವಾರಂಟಿನ ನಮೂನೆ

20. ವಶಕ್ಕೆ ಒಪ್ಪಿಸಲಾದ ಅಥವಾ ಹಿಂತಿರುಗಿಸಲಾದ ಆಪಾದಿತ ಅಥವಾ ಅಪರಾಧಿ ಎಂದು ನಿರ್ಣೀತನಾದ ವ್ಯಕ್ತಿಯನ್ನು ಸಾಗಿಸುವುದು

21. ವಿದೇಶಿ ರಾಜ್ಯವು ವಶಕ್ಕೆ ಒಪ್ಪಿಸಿದ ಅಥವಾ ಹಿಂದಿರುಗಿಸಿದ ಆಪಾದಿತನನ್ನು ಅಥವಾ ಅಪರಾಧಿ ಎಂದು ನಿರ್ಣೀತನಾದ ವ್ಯಕ್ತಿಯನ್ನು ಕೆಲವೊಂದು ಅಪರಾಧಗಳಿಗಾಗಿ ಅಧಿವಿಚಾರಣೆ ಮಾಡತಕ್ಕದ್ದಲ್ಲ

## ಅಧ್ಯಾಯ – V

### ಸಂಕೀರ್ಣ

22. ಪರಾರಿ ಅಪರಾಧಿಗಳು ದಸ್ತಗಿರಿಗೆ ಮತ್ತು ವಶಕ್ಕೆ ಒಪ್ಪಿಸುವುದಕ್ಕೆ ಅಥವಾ ಹಿಂತಿರುಗಿಸುವುದಕ್ಕೆ ಗುರಿಯಾಗುವುದು

23. ಸಮುದ್ರದ ಮೇಲೆ ಅಥವಾ ಆಕಾಶದಲ್ಲಿ ಮಾಡಿದ ಅಪರಾಧಗಳ ಬಗ್ಗೆ ಅಧಿಕಾರ ವ್ಯಾಪ್ತಿ

24. ಎರಡು ತಿಂಗಳುಗಳೊಳಗೆ ವಶಕ್ಕೆ ಒಪ್ಪಿಸದಿದ್ದರೆ ಅಥವಾ ಹಿಂತಿರುಗಿಸದಿದ್ದರೆ ದಸ್ತಗಿರಿಯಾದ ವ್ಯಕ್ತಿಯ ವಿಮೋಚನೆ

25. ದಸ್ತಗಿರಿಯಾದ ವ್ಯಕ್ತಿಯನ್ನು ಜಾಮಿನಿನ ಮೇಲೆ ಬಿಡುಗಡೆ ಮಾಡುವುದು

26. ಪ್ರತ್ಯರ್ಪಣ ಅಪರಾಧಗಳ ಬಗ್ಗೆ ದುಷ್ಪ್ರೇರಣೆ

27. ವಾರಂಟುಗಳ ಮೇರೆಗಿನ ಅಭಿರಕ್ಷೆಯ ಕಾನೂನು ಸಮ್ಮತತೆ ಮತ್ತು ಅಭಿರಕ್ಷೆಯಿಂದ ತಪ್ಪಿಸಿಕೊಂಡಾಗ ಪುನಃ ಹಿಡಿಯುವುದು

28. ಪರಾರಿ ಅಪರಾಧಿಯ ಬಳಿ ಸಿಕ್ಕ ಸ್ವತ್ತು

29. ಯಾರೇ ಪರಾರಿ ಅಪರಾಧಿಯನ್ನು ವಿಮೋಚನೆಗೊಳಿಸಲು ಕೇಂದ್ರ ಸರ್ಕಾರದ ಅಧಿಕಾರ

30. ಏಕಕಾಲದಲ್ಲಿ ಮಾಡಿಕೊಂಡ ಕೋರಿಕೆಗಳು

31. ವಶಕ್ಕೆ ಒಪ್ಪಿಸುವುದರ ಮೇಲೆ ನಿರ್ಬಂಧಗಳು

32. 29 ಮತ್ತು 31ನೇ ಪ್ರಕರಣಗಳು ಅವುಗಳಲ್ಲಿ ಯಾವುದೇ ಮಾರ್ಪಾಟು ಇಲ್ಲದೆ ಅನ್ವಯವಾಗತಕ್ಕದ್ದು
33. ಅಧಿನಿಯಮವು, ವಿದೇಶೀಯರ ಅಧಿನಿಯಮ, 1946ಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ
34. ರಾಜ್ಯಕ್ಷೇತ್ರಾತೀತ ಅಧಿಕಾರ ವ್ಯಾಪ್ತಿ
34ಎ. ಪ್ರತ್ಯರ್ಪಣಕ್ಕೆ ನಿರಾಕರಿಸಿದಾಗ ಪ್ರಾಸಿಕ್ಯೂಷನ್
34ಬಿ. ತಾತ್ಕಾಲಿಕ ದಸ್ತಗಿರಿ
34ಸಿ. ಮರಣದಂಡನೆ ಬದಲು ಆಜೀವ ಕಾರಾವಾಸದ ಉಪಬಂಧ
35. ಅಧಿಸೂಚಿಸಿದ ಆದೇಶಗಳು ಮತ್ತು ಅಧಿಸೂಚನೆಗಳನ್ನು ಸಂಸತ್ತಿನ ಮುಂದೆ ಇಡತಕ್ಕುದು
36. ನಿಯಮ ರಚನಾಧಿಕಾರ
37. ನಿರಸನ ಮತ್ತು ಉಳಿಸುವಿಕೆಗಳು

ಅನುಸೂಚಿ.

# ಪ್ರತ್ಯರ್ಪಣ ಅಧಿನಿಯಮ, 1962

(1962ರ ಅಧಿನಿಯಮ ಸಂಖ್ಯೆ 34)

**[15ನೇ ಸೆಪ್ಟೆಂಬರ್, 1962]**

ಪರಾರಿ ಅಪರಾಧಿಗಳ ಪ್ರತ್ಯರ್ಪಣಕ್ಕೆ ಸಂಬಂಧಿಸಿದ ಕಾನೂನನ್ನು ಕ್ರೋಡೀಕರಿಸುವ ಮತ್ತು ತಿದ್ದುಪಡಿ ಮಾಡುವ, ಮತ್ತು ಅದಕ್ಕೆ ಸಂಬಂಧಿಸಿದ ಹಾಗೂ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ.

ಭಾರತ ಗಣರಾಜ್ಯದ ಹದಿಮೂರನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು.

## ಅಧ್ಯಾಯ - I
## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಪ್ರತ್ಯರ್ಪಣ ಅಧಿನಿಯಮ, 1962 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ * ದಿನಾಂಕದಂದು ಜಾರಿಗೆ ಬರತಕ್ಕದ್ದು.

* ಜನವರಿ 5, 1963ಕರಂದು ಜಾರಿಗೆ ಬಂದಿದೆ. ಜಿ.ಎಸ್.ಆರ್.55 ದಿನಾಂಕ 5-1-1963 ಭಾರತ ರಾಜಪತ್ರ ಭಾಗ-II ನೋಡಿ.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಸಂಯುಕ್ತ ಅಪರಾಧ" ಎಂದರೆ ವಿದೇಶೀ ರಾಜ್ಯದಲ್ಲಿ ಅಥವಾ ಭಾರತದಲ್ಲಿ ಪೂರ್ಣವಾಗಿ ಅಥವಾ ಭಾಗಶಃ ಸಂಭವಿಸಿದ ಒಬ್ಬ ವ್ಯಕ್ತಿಯ ಕೃತ್ಯ ಅಥವಾ ವರ್ತನೆ. ಆದರೆ, ಅದರ ಪರಿಣಾಮಗಳು ಅಥವಾ ಉದ್ದೇಶಿತ ಪರಿಣಾಮಗಳು, ಒಟ್ಟಾರೆಯಾಗಿ ಗಣನೆಗೆ ತೆಗೆದುಕೊಂಡರೆ, ಸಂದರ್ಭಾನುಸಾರ, ಭಾರತದಲ್ಲಿ ಅಥವಾ ವಿದೇಶೀ ರಾಜ್ಯದಲ್ಲಿ ಪ್ರತ್ಯರ್ಪಣ ಅಪರಾಧವಾಗುತ್ತದೆ;

(ಬಿ) "ಅಪರಾಧ ನಿರ್ಣಯ" ಮತ್ತು "ಅಪರಾಧಿಯೆಂದು ನಿರ್ಣೀತನಾದ" ಎಂಬುದು ವಿದೇಶೀ ಕಾನೂನಿನ ಮೇರೆಗೆ ನ್ಯಾಯಾಧಿಕಾರದ ಉಪೇಕ್ಷೆಗಾಗಿ ಅಪರಾಧ ನಿರ್ಣಯವಾಗಿರುವ ಅಪರಾಧ ನಿರ್ಣಯವನ್ನು ಒಳಗೊಳ್ಳುವುದಿಲ್ಲ ಅಥವಾ ಅದಕ್ಕೆ ಉಲ್ಲೇಖವನ್ನು ಹೊಂದಿರುವುದಿಲ್ಲ, ಆದರೆ "ಆಪಾದಿತ ವ್ಯಕ್ತಿ" ಎಂಬುದು ನ್ಯಾಯಾಧಿಕಾರದ ಉಪೇಕ್ಷೆಗಾಗಿ ಹಾಗೆ ಅಪರಾಧಿಯೆಂದು ನಿರ್ಣೀತನಾದ ವ್ಯಕ್ತಿಯನ್ನು ಒಳಗೊಳ್ಳುತ್ತದೆ;

(ಸಿ) "ಪ್ರತ್ಯರ್ಪಣ ಅಪರಾಧ" ಎಂದರೆ,-

(i) ಕೌಲು ರಾಜ್ಯವಾಗಿರುವ ವಿದೇಶೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಆ ರಾಜ್ಯದೊಂದಿಗೆ ಮಾಡಿಕೊಂಡ ಪ್ರತ್ಯರ್ಪಣ ಕೌಲಿನಲ್ಲಿ ಉಪಬಂಧಿಸಿರುವ ಅಪರಾಧ;

(ii) ಕೌಲು ರಾಜ್ಯವನ್ನು ಹೊರತುಪಡಿಸಿ, ವಿದೇಶೀ ರಾಜ್ಯಕ್ಕೆ ಸಂಬಂಧಪಟ್ಟಂತೆ, ಭಾರತದ ಅಥವಾ ವಿದೇಶೀ ರಾಜ್ಯದ ಕಾನೂನುಗಳ ಮೇರೆಗೆ ಒಂದು ವರ್ಷಕ್ಕಿಂತ ಕಡಿಮೆಯಿಲ್ಲದಂಥ ಅವಧಿಗೆ ಕಾರಾವಾಸದಿಂದ ದಂಡನೀಯವಾದ ಅಪರಾಧ ಮತ್ತು ಅದು ಸಂಯುಕ್ತ ಅಪರಾಧವನ್ನು ಒಳಗೊಳ್ಳುತ್ತದೆ;

(ಡಿ) "ಪ್ರತ್ಯರ್ಪಣ ಕೌಲು" ಎಂದರೆ ಪರಾರಿ ಅಪರಾಧಿಗಳ ಪ್ರತ್ಯರ್ಪಣಕ್ಕೆ ಸಂಬಂಧಪಟ್ಟ ವಿದೇಶೀ ರಾಜ್ಯದೊಂದಿಗೆ ಭಾರತವು ಮಾಡಿಕೊಂಡ ಕೌಲು, ಒಪ್ಪಂದ ಅಥವಾ ವ್ಯವಸ್ಥೆ ಮತ್ತು ಅದು ಪರಾರಿ

ಅಪರಾಧಿಗಳ ಪ್ರತ್ಯರ್ಪಣಕ್ಕೆ ಸಂಬಂಧಪಟ್ಟಂತೆ 1947ರ ಆಗಸ್ಟ್ 15ನೇ ದಿವಸಕ್ಕೆ ಮುಂಚೆ ಭಾರತಕ್ಕೆ ವ್ಯಾಪ್ತವಾಗುವ ಮತ್ತು ಅದನ್ನು ಬದ್ಧಗೊಳಿಸುವಂಥ ಯಾವುದೇ ಕೌಲು, ಒಪ್ಪಂದ ಅಥವಾ ವ್ಯವಸ್ಥೆಯನ್ನು ಒಳಗೊಳ್ಳುತ್ತದೆ;

(ಇ) "ವಿದೇಶೀ ರಾಜ್ಯ" ಎಂದರೆ ಭಾರತದ ಹೊರಗಿನ ಯಾವುದೇ ರಾಜ್ಯ ಮತ್ತು ಅದರ ಪ್ರತಿಯೊಂದು ಘಟಕ ಭಾಗ, ವಸಾಹತು ಅಥವಾ ಅಂಥ ರಾಜ್ಯದ ಆಶ್ರಿತ ದೇಶವನ್ನು ಒಳಗೊಳ್ಳುತ್ತದೆ;

(ಎಫ್) "ಪರಾರಿ ಅಪರಾಧಿ" ಎಂದರೆ ವಿದೇಶೀ ರಾಜ್ಯದ ಅಧಿಕಾರ ವ್ಯಾಪ್ತಿಯೊಳಗೆ ಪ್ರತ್ಯರ್ಪಣ ಅಪರಾಧದ ಆಪಾದಿತನಾದ ಅಥವಾ ಅಪರಾಧಿಯೆಂದು ನಿರ್ಣೀತನಾದ ಒಬ್ಬ ವ್ಯಕ್ತಿ ಮತ್ತು ಭಾರತದಲ್ಲಿರುವಾಗ ವಿದೇಶೀ ರಾಜ್ಯದಲ್ಲಿ ಪ್ರತ್ಯರ್ಪಣ ಅಪರಾಧವನ್ನು ಮಾಡುವಿಕೆಯಲ್ಲಿ ಒಳಸಂಚು ಮಾಡುವ, ಮಾಡಲು ಪ್ರಯತ್ನಿಸುವ ಅಥವಾ ಪ್ರಚೋದಿಸುವ ಅಥವಾ ಸಹಾಯಕನಾಗಿ ಭಾಗವಹಿಸುವ ವ್ಯಕ್ತಿಯನ್ನು ಒಳಗೊಳ್ಳುತ್ತದೆ;

(ಜಿ) "ಮ್ಯಾಜಿಸ್ಟ್ರೇಟ್" ಎಂದರೆ ಮೊದಲನೆಯ ದರ್ಜೆಯ ಮ್ಯಾಜಿಸ್ಟ್ರೇಟ್ ಅಥವಾ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್;

(ಹೆಚ್) "ಅಧಿಸೂಚಿತ ಆದೇಶ" ಎಂದರೆ ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸಲಾದ ಆದೇಶ;

(ಐ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು; ಮತ್ತು

(ಜೆ) "ಕೌಲು ರಾಜ್ಯ" ಎಂದರೆ ಯಾವ ವಿದೇಶಿ ರಾಜ್ಯದೊಂದಿಗೆ ಪ್ರತ್ಯರ್ಪಣ ಕೌಲು ಪ್ರವರ್ತನೆಯಲ್ಲಿರುವುದೋ ಆ ವಿದೇಶಿ ರಾಜ್ಯ.

**3. ಅಧಿನಿಯಮದ ಅನ್ವಯ.**– (1) ಕೇಂದ್ರ ಸರ್ಕಾರವು, ಅಧಿಸೂಚಿಸಿದ ಆದೇಶದ ಮೂಲಕ, ಈ ಅಧಿನಿಯಮದ ಅಧ್ಯಾಯ IIIನ್ನು ಹೊರತುಪಡಿಸಿ, ಇತರ ಉಪಬಂಧಗಳು, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಅಂಥ ವಿದೇಶೀ ರಾಜ್ಯಕ್ಕೆ ಅಥವಾ ಅದರ ಭಾಗಕ್ಕೆ ಅನ್ವಯವಾಗತಕ್ಕದ್ದು ಎಂದು ನಿರ್ದೇಶಿಸಬಹುದು.

(2) ಕೇಂದ್ರ ಸರ್ಕಾರವು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವಂತೆ, ಅಧಿಸೂಚಿಸಿದ ಅದೇ ಆದೇಶ ಅಥವಾ ಯಾವುದೇ ತರುವಾಯದ ಅಧಿಸೂಚಿಸಿದ ಆದೇಶದ ಮೂಲಕ ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಭಾರತದ ಭಾಗದಲ್ಲಿ ಕಂಡುಬಂದ ಅಥವಾ ಇರುವನೆಂದು ಶಂಕಿಸಲಾದ ಪರಾರಿ ಅಪರಾಧಿಗಳಿಗೆ ಅಂಥ ಅನ್ವಯವನ್ನು ಸೀಮಿತಗೊಳಿಸಬಹುದು.

(3) ಅಧಿಸೂಚಿಸಿದ ಆದೇಶವು ಕೌಲು ರಾಜ್ಯಕ್ಕೆ ಸಂಬಂಧಪಟ್ಟಿರುವಲ್ಲಿ,–

(ಎ) ಅದು ಆ ರಾಜ್ಯದೊಂದಿಗೆ ಮಾಡಿಕೊಂಡ ಪ್ರತ್ಯರ್ಪಣ ಕೌಲನ್ನು ಪೂರ್ಣವಾಗಿ ನಿರೂಪಿಸತಕ್ಕುದು;

(ಬಿ) ಅದು ಆ ಕೌಲಿಗಿಂತ ಯಾವುದೇ ಹೆಚ್ಚಿನ ಅವಧಿಯವರೆಗೆ ಜಾರಿಯಲ್ಲಿರತಕ್ಕದ್ದಲ್ಲ;

(ಸಿ) ಕೇಂದ್ರ ಸರ್ಕಾರವು ಅದೇ ಅಥವಾ ಯಾವುದೇ ತರುವಾಯದ ಅಧಿಸೂಚಿಸಿದ ಆದೇಶದ ಮೂಲಕ ಈ ಅಧಿನಿಯಮದ ಅನ್ವಯವನ್ನು, ಆ ರಾಜ್ಯದೊಂದಿಗೆ ಮಾಡಿಕೊಂಡ ಕೌಲನ್ನು ಕಾರ್ಯಗತಗೊಳಿಸುವುದಕ್ಕಾಗಿ ವಿಹಿತವೆಂದು ಭಾವಿಸಬಹುದಾದಂಥ ಮಾರ್ಪಾಟುಗಳು, ಅಪವಾದಗಳು, ಷರತ್ತುಗಳು ಮತ್ತು ಪರಿಮಿತಿಗಳಿಗೆ ಒಳಪಡಿಸಬಹುದು.

(4) ಯಾವುದೇ ವಿದೇಶೀ ರಾಜ್ಯದೊಂದಿಗೆ ಭಾರತವು ಯಾವ ಪ್ರತ್ಯರ್ಪಣ ಕೌಲನ್ನು ಮಾಡಿಕೊಂಡಿರದಿದ್ದಲ್ಲಿ, ಭಾರತವು ಮತ್ತು ವಿದೇಶೀ ರಾಜ್ಯವು ಪಕ್ಷಕಾರರಾಗಿರುವ ಯಾವುದೇ ಒಡಂಬಡಿಕೆಯನ್ನು ಆ ಒಡಂಬಡಿಕೆಯಲ್ಲಿ ನಿರ್ದಿಷ್ಟಪಡಿಸಿದ ಅಪರಾಧಗಳಿಗೆ ಸಂಬಂಧಪಟ್ಟಂತೆ

ಪ್ರತ್ಯರ್ಪಣಕ್ಕಾಗಿ ಅವಕಾಶ ಕಲ್ಪಿಸಲು ಆ ವಿದೇಶೀ ರಾಜ್ಯದೊಂದಿಗೆ ಭಾರತವು ಮಾಡಿಕೊಂಡ ಪ್ರತ್ಯರ್ಪಣ ಕೌಲು ಎಂದು ಅಧಿಸೂಚಿಸಿದ ಆದೇಶದ ಮೂಲಕ ಕೇಂದ್ರ ಸರ್ಕಾರವು ಪರಿಗಣಿಸಬಹುದು.

## ಅಧ್ಯಾಯ – II

## IIIನೇ ಅಧ್ಯಾಯವು ಅನ್ವಯವಾಗದಿರುವ ವಿದೇಶೀ ರಾಜ್ಯಗಳಿಗೆ ಪರಾರಿ ಅಪರಾಧಿಗಳ ಪ್ರತ್ಯರ್ಪಣ

**4. ವಶಕ್ಕೆ ಒಪ್ಪಿಸಲು ಕೋರಿಕೆ.**– ವಿದೇಶೀ ರಾಜ್ಯದ ಪರಾರಿ ಅಪರಾಧಿಯನ್ನು ವಶಕ್ಕೆ ಒಪ್ಪಿಸಬೇಕೆಂಬ ಕೋರಿಕೆಯನ್ನು,–

(ಎ) ದೆಹಲಿಯಲ್ಲಿರುವ ಆ ವಿದೇಶೀ ರಾಜ್ಯದ ರಾಜತಾಂತ್ರಿಕ ಪ್ರತಿನಿಧಿಯ ಮೂಲಕ; ಅಥವಾ

(ಬಿ) ಆ ವಿದೇಶೀ ರಾಜ್ಯದ ಸರ್ಕಾರವು ಆ ರಾಜ್ಯದಲ್ಲಿನ ಅದರ ರಾಜತಾಂತ್ರಿಕ ಪ್ರತಿನಿಧಿಯ ಮೂಲಕ ಕೇಂದ್ರ ಸರ್ಕಾರಕ್ಕೆ ತಿಳಿಸುವ ಮೂಲಕ

– ಕೇಂದ್ರ ಸರ್ಕಾರಕ್ಕೆ ಮಾಡಿಕೊಳ್ಳಬಹುದು.

ಮತ್ತು ಈ ಎರಡೂ ವಿಧಾನಗಳು ಅನುಕೂಲವಾಗಿಲ್ಲದಿದ್ದರೆ, ಈ ಕೋರಿಕೆಯನ್ನು ಆ ವಿದೇಶೀ ರಾಜ್ಯದ ಸರ್ಕಾರವು ಭಾರತ ಸರ್ಕಾರದೊಂದಿಗೆ ಮಾಡಿಕೊಂಡ ವ್ಯವಸ್ಥೆಯ ಮೂಲಕ ಇತ್ಯರ್ಥವಾದಂಥ ಇತರ ವಿಧಾನದಲ್ಲಿ ಮಾಡಿಕೊಳ್ಳತಕ್ಕದ್ದು.

**5. ಮ್ಯಾಜಿಸ್ಟ್ರೇಟನಿಂದ ವಿಚಾರಣೆಗಾಗಿ ಆದೇಶ.**– ಅಂಥ ಕೋರಿಕೆಯನ್ನು ಮಾಡಿಕೊಂಡಿದ್ದರೆ, ಕೇಂದ್ರ ಸರ್ಕಾರವು, ಸೂಕ್ತವೆಂದು ತಾನು ಯೋಚಿಸಿದರೆ, ಯಾರೇ ಮ್ಯಾಜಿಸ್ಟ್ರೇಟನಿಗೆ, ಆ ಅಪರಾಧವು ಅವನ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಮಾಡಿದ್ದ ಅಪರಾಧವಾಗಿದ್ದರೆ ಆ ಅಪರಾಧದ ವಿಚಾರಣೆ ಮಾಡಲು ಅವನಿಗೆ ಅಧಿಕಾರ ವ್ಯಾಪ್ತಿ ಇದ್ದಿದ್ದರೆ ಹೇಗೋ ಹಾಗೆ ಆ ಪ್ರಕರಣದ ವಿಚಾರಣೆ ಮಾಡುವಂತೆ ನಿರ್ದೇಶಿಸಿರುವ ಆದೇಶವನ್ನು ಹೊರಡಿಸಬಹುದು.

**6. ದಸ್ತಗಿರಿ ವಾರಂಟನ್ನು ಹೊರಡಿಸುವುದು.**– 5ನೇ ಪ್ರಕರಣದ ಮೇರೆಗಿನ ಕೇಂದ್ರ ಸರ್ಕಾರದ ಆದೇಶವನ್ನು ಸ್ವೀಕರಿಸಿದ ಮೇಲೆ, ಮ್ಯಾಜಿಸ್ಟ್ರೇಟನು ಪರಾರಿ ಅಪರಾಧಿಯನ್ನು ದಸ್ತಗಿರಿ ಮಾಡುವುದಕ್ಕಾಗಿ ವಾರಂಟನ್ನು ಹೊರಡಿಸಬಹುದು.

**7. ಮ್ಯಾಜಿಸ್ಟ್ರೇಟನ ಮುಂದೆ ಪ್ರಕ್ರಿಯೆ.**– (1) ಪರಾರಿ ಅಪರಾಧಿಯು ಮ್ಯಾಜಿಸ್ಟ್ರೇಟನ ಮುಂದೆ ಹಾಜರಾದಾಗ ಅಥವಾ ಮ್ಯಾಜಿಸ್ಟ್ರೇಟನ ಮುಂದೆ ಅವನನ್ನು ತಂದಾಗ ಆ ಮ್ಯಾಜಿಸ್ಟ್ರೇಟನು ಆ ಮೊಕದ್ದಮೆಯು ಸೆಷನ್ಸ್ ನ್ಯಾಯಾಲಯ ಅಥವಾ ಉಚ್ಚನ್ಯಾಯಾಲಯವು ಅಧಿವಿಚಾರಣೆಯನ್ನು ಮಾಡಬಹುದಾಗಿದ್ದಿದ್ದರೆ ಆದಷ್ಟು ಮಟ್ಟಿಗೆ ಅದೇ ರೀತಿಯಲ್ಲಿ ವಿಚಾರಣೆ ಮಾಡತಕ್ಕದ್ದು ಮತ್ತು ಅವನು ಅದೇ ಅಧಿಕಾರ ವ್ಯಾಪ್ತಿ ಮತ್ತು ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) ಹಿಂದೆ ಹೇಳಿದ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಆ ಮ್ಯಾಜಿಸ್ಟ್ರೇಟನು ವಿಶೇಷವಾಗಿ, ಆ ವಿದೇಶಿ ರಾಜ್ಯದ ಕೋರಿಕೆಯನ್ನು ಸಮರ್ಥಿಸಿ, ವಿಶೇಷವಾಗಿ ಯಾವ ಅಪರಾಧದ ಬಗ್ಗೆ ಪರಾರಿ ಆಪಾದಿತನಾಗಿರುವನೋ ಅಥವಾ ಅಪರಾಧಿಯೆಂದು ನಿರ್ಣೀತನಾಗಿರುವನೋ ಆ ಅಪರಾಧವು ರಾಜಕೀಯ ಸ್ವರೂಪದ ಅಪರಾಧ ಅಥವಾ ಪ್ರತ್ಯರ್ಪಣ ಅಪರಾಧವಲ್ಲವೆಂದು ತೋರಿಸುವ ಯಾವುದೇ ಸಾಕ್ಷ್ಯವನ್ನೂ ಒಳಗೊಂಡು ಆ ವಿದೇಶಿ ರಾಜ್ಯದ ಕೋರಿಕೆಯನ್ನು ಸಮರ್ಥಿಸುವ ಮತ್ತು ಪರಾರಿ ಅಪರಾಧಿಯ ಪರವಾಗಿ ಹಾಜರುಪಡಿಸಬಹುದಾದಂಥ ಸಾಕ್ಷ್ಯವನ್ನು ತೆಗೆದುಕೊಳ್ಳತಕ್ಕದ್ದು.

(3) ಮ್ಯಾಜಿಸ್ಟ್ರೇಟನು, ವಿದೇಶೀ ರಾಜ್ಯದ ಕೋರಿಕೆಗೆ ಸಮರ್ಥನೆಯಾಗಿ ಮೊದಲ ನೋಟಕ್ಕೆ ಸಮ್ಮತವಾದ ವಾದವನ್ನು ಪ್ರತಿಪಾದಿಸಿಲ್ಲವೆಂದು ಅಭಿಪ್ರಾಯಪಟ್ಟರೆ ಅವನು ಆ ಪರಾರಿ ಅಪರಾಧಿಯನ್ನು ವಿಮೋಚನೆಗೊಳಿಸತಕ್ಕದ್ದು.

(4) ಆ ಮ್ಯಾಜಿಸ್ಟ್ರೇಟನು, ವಿದೇಶೀ ರಾಜ್ಯದ ಕೋರಿಕೆಗೆ ಸಮರ್ಥನೆಯಾಗಿ, ಮೊದಲ ನೋಟಕ್ಕೆ ಸಮ್ಮತವಾದ ವಾದವನ್ನು ಪ್ರತಿಪಾದಿಸಲಾಗಿದೆಯೆಂದು ಅಭಿಪ್ರಾಯಪಟ್ಟರೆ ಅವನು ಕೇಂದ್ರ ಸರ್ಕಾರದ ಆದೇಶಗಳನ್ನು ನಿರೀಕ್ಷಿಸಿ ಆ ಪರಾರಿ ಅಪರಾಧಿಯನ್ನು ಬಂದೀಖಾನೆಗೆ ಒಪ್ಪಿಸಬಹುದು ಮತ್ತು ಕೇಂದ್ರ ಸರ್ಕಾರಕ್ಕೆ ಅವನ ವಿಚಾರಣೆಯ ಫಲಿತಾಂಶವನ್ನು ವರದಿ ಮಾಡತಕ್ಕದ್ದು ಮತ್ತು ಅಂಥ ವರದಿಯೊಂದಿಗೆ ಆ ಪರಾರಿ ಅಪರಾಧಿಯು ಕೇಂದ್ರ ಸರ್ಕಾರದ ಪರ್ಯಾಲೋಚನೆಗಾಗಿ ಒಪ್ಪಿಸಲು ಇಚ್ಛಿಸಬಹುದಾದಂಥ ಯಾವುದೇ ಲಿಖಿತ ಹೇಳಿಕೆಯನ್ನು ಪಡೆದು ಕಳುಹಿಸತಕ್ಕದ್ದು.

**8. ಪರಾರಿ ಅಪರಾಧಿಯನ್ನು ವಶಕ್ಕೆ ಒಪ್ಪಿಸುವುದು.**- 7ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಆ ವರದಿ ಮತ್ತು ಹೇಳಿಕೆಯನ್ನು ಸ್ವೀಕರಿಸಿದ ಮೇಲೆ, ಕೇಂದ್ರ ಸರ್ಕಾರವು ಆ ಪರಾರಿ ಅಪರಾಧಿಯನ್ನು ಆ ವಿದೇಶೀ ರಾಜ್ಯಕ್ಕೆ ಒಪ್ಪಿಸಬೇಕೆಂದು ಅಭಿಪ್ರಾಯಪಟ್ಟರೆ, ಅದು ಆ ಪರಾರಿ ಅಪರಾಧಿಯ ಅಭಿರಕ್ಷೆ ಮತ್ತು ಸ್ಥಳಾಂತರಣಕ್ಕಾಗಿ ಮತ್ತು ಆ ವಾರಂಟಿನಲ್ಲಿ ಹೆಸರಿಸುವ ಸ್ಥಳದಲ್ಲಿ ಮತ್ತು ಹೆಸರಿಸುವ ವ್ಯಕ್ತಿಗೆ ಅವನನ್ನು ವಶಕ್ಕೆ ಒಪ್ಪಿಸುವುದಕ್ಕಾಗಿ ವಾರಂಟನ್ನು ಹೊರಡಿಸಬಹುದು.

**9. ಕೆಲವು ಪ್ರಕರಣಗಳಲ್ಲಿ ದಸ್ತಗಿರಿ ವಾರಂಟುಗಳನ್ನು ಹೊರಡಿಸಲು ಮ್ಯಾಜಿಸ್ಟ್ರೇಟನ ಅಧಿಕಾರ.**- (1) ಯಾರೇ ಮ್ಯಾಜಿಸ್ಟ್ರೇಟನಿಗೆ ಅವನ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಇರುವ ಒಬ್ಬ ವ್ಯಕ್ತಿಯು ವಿದೇಶೀ ರಾಜ್ಯದ ಪರಾರಿ ಅಪರಾಧಿಯಾಗಿದ್ದಾನೆಂದು ಕಂಡುಬರುವಲ್ಲಿ, ಅವನು ಸೂಕ್ತವೆಂದು ಯೋಚಿಸಿದರೆ, ಅವನು ಆ ವ್ಯಕ್ತಿಯ ಆಪಾದಿತನಾಗಿರುವ ಅಥವಾ ಅಪರಾಧಿಯೆಂದು ನಿರ್ಣೀತನಾಗಿರುವ ಅಪರಾಧವನ್ನು ಅವನ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಮಾಡಿದ್ದರೆ ಅವನ ಅಭಿಪ್ರಾಯದಲ್ಲಿ ವಾರಂಟು ಹೊರಡಿಸುವುದಕ್ಕೆ ಸಮರ್ಥನೆ ಒದಗಿಸುವಂಥ ಮಾಹಿತಿ ಮತ್ತು ಸಾಕ್ಷ್ಯದ ಮೇಲೆ, ಆ ವ್ಯಕ್ತಿಯ ದಸ್ತಗಿರಿಗಾಗಿ ವಾರಂಟನ್ನು ಹೊರಡಿಸಬಹುದು.

(2) ಮ್ಯಾಜಿಸ್ಟ್ರೇಟನು (1)ನೇ ಉಪಪ್ರಕರಣದ ಮೇರೆಗೆ ವಾರಂಟು ಹೊರಡಿಸಿರುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ತಕ್ಷಣವೇ ವರದಿ ಮಾಡತಕ್ಕುದು ಮತ್ತು ಅವನು ಆ ಮಾಹಿತಿ ಮತ್ತು ಸಾಕ್ಷ್ಯ ಅಥವಾ ಅದರ ಪ್ರಮಾಣಿತ ಪ್ರತಿಗಳನ್ನು ಆ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(3) ಮ್ಯಾಜಿಸ್ಟ್ರೇಟನು (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ವಾರಂಟಿನ ಮೇಲೆ ದಸ್ತಗಿರಿಯಾದ ವ್ಯಕ್ತಿಯನ್ನು, ಮೂರು ತಿಂಗಳುಗಳಿಗಿಂತ ಹೆಚ್ಚಿಗೆ, ಕೇಂದ್ರ ಸರ್ಕಾರದಿಂದ ಅಂಥ ವ್ಯಕ್ತಿಗೆ ಸಂಬಂಧಿಸಿದಂತೆ 5ನೇ ಪ್ರಕರಣದ ಮೇರೆಗಿನ ಆದೇಶವನ್ನು ಆ ಅವಧಿಯವರೆಗೆ ಸ್ವೀಕರಿಸಿದ ಹೊರತು ತಡೆಹಿಡಿದಿಡತಕ್ಕದ್ದಲ್ಲ.

**10. ನಿಶಾನೆಗಳು, ಸಾಕ್ಷೀದಾರರ ಹೇಳಿಕೆಗಳು ಮತ್ತು ಇತರ ದಸ್ತಾವೇಜುಗಳನ್ನು ಸಾಕ್ಷ್ಯದಲ್ಲಿ ಸ್ವೀಕರಿಸುವುದು ಮತ್ತು ಅವುಗಳ ಅಧಿಪ್ರಮಾಣೀಕರಣ.**- (1) ಈ ಅಧ್ಯಾಯದ ಮೇರೆಗೆ, ಒಂದು ವಿದೇಶೀ ರಾಜ್ಯದ ಒಬ್ಬ ಪರಾರಿ ಅಪರಾಧಿಯ ವಿರುದ್ಧ ಯಾವುವೇ ವ್ಯವಹರಣೆಗಳಲ್ಲಿ, ನಿಶಾನೆಗಳು ಮತ್ತು ಸಾಕ್ಷಿದಾರರ ಹೇಳಿಕೆಗಳು (ಯಾರ ವಿರುದ್ಧ ಅವುಗಳನ್ನು ಉಪಯೋಗಿಸಲಾಗಿದೆಯೋ ಅಥವಾ ಇಲ್ಲವೋ ಅವರ ಸಮ್ಮುಖದಲ್ಲಿ ಅವುಗಳನ್ನು ಸ್ವೀಕರಿಸಿರಲಿ, ಅಥವಾ ತೆಗೆದುಕೊಂಡಿರಲಿ) ಮತ್ತು ಅವುಗಳ ಪ್ರತಿಗಳು ಮತ್ತು ಸಂಗತಿಗಳ ಬಗ್ಗೆ ಸರ್ಕಾರಿ ಪ್ರಮಾಣಪತ್ರಗಳು ಮತ್ತು ಸಂಗತಿಗಳನ್ನು ನಿರೂಪಿಸುವ ನ್ಯಾಯಿಕ ದಾಖಲೆಗಳನ್ನು, ಅವುಗಳನ್ನು ಕ್ರಮಬದ್ಧವಾಗಿ ಅಧಿಪ್ರಮಾಣಿಸಲಾಗಿದ್ದರೆ ಸಾಕ್ಷ್ಯವೆಂದು ಸ್ವೀಕರಿಸಬಹುದು.

(2) ಭಾರತದ ಹೊರಗಡೆಯ ಯಾವುದೇ ನ್ಯಾಯಾಲಯವು ಹೊರಡಿಸಿದೆ ಎಂದು ಅಥವಾ ತೆಗೆದುಕೊಂಡಿದೆ ಎಂದು ತಾತ್ಪರ್ಯವಾಗುವಂಥ ವಾರಂಟುಗಳು, ಸಾಕ್ಷಿದಾರರ ಹೇಳಿಕೆಗಳು ಅಥವಾ ಪ್ರಮಾಣ ವಚನದ ಮೇಲೆ ಮಾಡಿದ ಹೇಳಿಕೆಗಳು ಅಥವಾ ಅವುಗಳ ಪ್ರತಿಗಳು, ಅಂಥ ಯಾವುದೇ ನ್ಯಾಯಾಲಯದ ಮುಂದೆ ಮಾಡಿರುವ ಅಪರಾಧ ನಿರ್ಣಯದ ಬಗೆಗಿನ ಪ್ರಮಾಣ ಪತ್ರಗಳು ಅಥವಾ ಅದರ ಸಂಗತಿಗಳನ್ನು ತಿಳಿಸುವ ನ್ಯಾಯಿಕ ದಸ್ತಾವೇಜುಗಳನ್ನು,-

(ಎ) ವಾರಂಟನ್ನು ಹೊರಡಿಸಿದ ರಾಜ್ಯದ ಅಥವಾ ಅಂಥ ರಾಜ್ಯದಲ್ಲಿ ಅಥವಾ ಅದಕ್ಕಾಗಿ ಕೆಲಸ ಮಾಡುತ್ತಿರುವ ನ್ಯಾಯಾಧೀಶ, ಮ್ಯಾಜಿಸ್ಟ್ರೇಟ್ ಅಥವಾ ಅಧಿಕಾರಿಯು ಅಂಥ ವಾರಂಟಿಗೆ ರುಜು ಮಾಡಿರುವುದಾಗಿ ತಾತ್ಪರ್ಯವಾದರೆ;

(ಬಿ) ಸಾಕ್ಷಿದಾರರ ಹೇಳಿಕೆಗಳು ಅಥವಾ ಹೇಳಿಕೆಗಳು ಅಥವಾ ಅವುಗಳ ಪ್ರತಿಗಳು, ಅವುಗಳನ್ನು ತೆಗೆದುಕೊಂಡಿರುವ ರಾಜ್ಯದ ಅಥವಾ ಅಂಥ ರಾಜ್ಯದಲ್ಲಿ ಅಥವಾ ಅದಕ್ಕಾಗಿ ಕಾರ್ಯನಿರ್ವಹಿಸುತ್ತಿರುವ ನ್ಯಾಯಾಧೀಶ, ಮ್ಯಾಜಿಸ್ಟ್ರೇಟ್ ಅಥವಾ ಅಧಿಕಾರಿಯ ರುಜುವಿನ ಮೂಲಕ ಪ್ರಮಾಣೀಕರಿಸಿರುವುದಾಗಿ ಅಥವಾ ಸಂದರ್ಭವು ಅಗತ್ಯಪಡಿಸಿದಂತೆ ಸಾಕ್ಷಿದಾರರ ಮೂಲಕ ಹೇಳಿಕೆಗಳು ಅಥವಾ ಹೇಳಿಕೆಗಳು ಆಗಿರುವುದಾಗಿ ಅಥವಾ ಅವುಗಳ ಯಥಾಪ್ರತಿಗಳು ಆಗಿರುವುದಾಗಿ ತಾತ್ಪರ್ಯವಾದರೆ;

(ಸಿ) ಅಪರಾಧ ನಿರ್ಣಯದ ಪ್ರಮಾಣಪತ್ರ ಅಥವಾ ಆ ಸಂಗತಿಯನ್ನು ತಿಳಿಸುವ ನ್ಯಾಯಿಕ ದಸ್ತಾವೇಜು ಆ ಅಪರಾಧ ನಿರ್ಣಯವು ನಡೆದ ರಾಜ್ಯದ ಅಥವಾ ಅಂಥ ರಾಜ್ಯದಲ್ಲಿ ಅಥವಾ ಅದಕ್ಕಾಗಿ ಕಾರ್ಯನಿರ್ವಹಿಸುತ್ತಿರುವ ನ್ಯಾಯಾಧೀಶ, ಮ್ಯಾಜಿಸ್ಟ್ರೇಟ್ ಅಥವಾ ಅಧಿಕಾರಿಯು ಪ್ರಮಾಣೀಕರಿಸಿರುವುದಾಗಿ ತಾತ್ಪರ್ಯವಾದರೆ;

(ಡಿ) ಸಂದರ್ಭಾನುಸಾರ ಆ ವಾರಂಟುಗಳು, ಸಾಕ್ಷ್ಯದಾರರ ಹೇಳಿಕೆಗಳು, ಹೇಳಿಕೆಗಳು, ಪ್ರತಿಗಳು, ಪ್ರಮಾಣಪತ್ರಗಳು ಮತ್ತು ನ್ಯಾಯಿಕ ದಸ್ತಾವೇಜುಗಳನ್ನು ಹೊರಡಿಸಿದ, ತೆಗೆದುಕೊಂಡ ಅಥವಾ ಕೊಟ್ಟಿರುವ ರಾಜ್ಯದ ಯಾರೇ ಸಾಕ್ಷಿಯ ಪ್ರಮಾಣ ವಚನದಿಂದ ಅಥವಾ ಮಂತ್ರಿಯ ಅಧಿಕೃತ ಮೊಹರಿನಿಂದ ಅಧಿಪ್ರಮಾಣಿತವಾಗಿದ್ದರೆ

– ಕ್ರಮಬದ್ಧವಾಗಿ ಅಧಿಪ್ರಮಾಣಿತವಾಗಿರುವುದಾಗಿ ಭಾವಿಸತಕ್ಕುದು.

**11. ಈ ಅಧ್ಯಾಯವು, IIIನೇ ಅಧ್ಯಾಯವು ಅನ್ವಯವಾಗುವಂಥ ವಿದೇಶಿ ರಾಜ್ಯಗಳಿಗೆ ಅನ್ವಯವಾಗತಕ್ಕದ್ದಲ್ಲ.**– ಈ ಅಧ್ಯಾಯದಲ್ಲಿರುವುದು ಯಾವುದೂ, IIIನೇ ಅಧ್ಯಾಯವು ಅನ್ವಯವಾಗುವಂಥ ವಿದೇಶಿ ರಾಜ್ಯದ ಪರಾರಿ ಅಪರಾಧಿಗೆ ಅನ್ವಯವಾಗತಕ್ಕದ್ದಲ್ಲ.

## ಅಧ್ಯಾಯ – III

## ಪರಾರಿ ಅಪರಾಧಿಗಳನ್ನು ಪ್ರತ್ಯರ್ಪಣ ವ್ಯವಸ್ಥೆಗಳನ್ನು ಹೊಂದಿರುವ ವಿದೇಶಿ ರಾಜ್ಯಗಳಿಗೆ ಹಿಂತಿರುಗಿಸುವುದು

**12. ಅಧ್ಯಾಯದ ಅನ್ವಯ .**– (1) ಈ ಅಧ್ಯಾಯವು, ಯಾವ ವಿದೇಶಿ ರಾಜ್ಯದೊಂದಿಗೆ ಪ್ರತ್ಯರ್ಪಣ ವ್ಯವಸ್ಥೆ ಮಾಡಿಕೊಳ್ಳಲಾಗಿದೆಯೋ, ಆ ಕಾರಣದಿಂದಾಗಿ, ಈ ಅಧ್ಯಾಯವನ್ನು ಆ ರಾಜ್ಯಕ್ಕೆ ಅನ್ವಯ ಮಾಡುವುದು ವಿಹಿತವೆಂದು ಕಂಡುಬರಬಹುದೋ ಅಂಥ ಯಾವುದೇ ವಿದೇಶಿ ರಾಜ್ಯಕ್ಕೆ ಮಾತ್ರ ಅನ್ವಯವಾಗತಕ್ಕದ್ದು.

(2) ಅಂಥ ಪ್ರತಿಯೊಂದು ಅನ್ವಯಿಸುವಿಕೆಯನ್ನು ಅಧಿಸೂಚಿಸಿದ ಆದೇಶದ ಮೂಲಕ ಮಾಡತಕ್ಕದ್ದು ಮತ್ತು ಕೇಂದ್ರ ಸರ್ಕಾರವು ಅದೇ ಅಥವಾ ತರುವಾಯದ ಯಾವುದೇ ಅಧಿಸೂಚಿಸಿದ ಆದೇಶದ ಮೂಲಕ ಈ ಅಧ್ಯಾಯವು ಮತ್ತು I, IV ಮತ್ತು Vನೇ ಅಧ್ಯಾಯಗಳು ಯಾವುದೇ ಅಂಥ ವಿದೇಶಿ ರಾಜ್ಯಕ್ಕೆ ಸಂಬಂಧಪಟ್ಟಂತೆ, ಆ ವ್ಯವಸ್ಥೆಯನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಆ ಆದೇಶದಲ್ಲಿ ನಿರ್ದಿಷ್ಟಪಡಿಸುವುದು, ಅದು ಸೂಕ್ತವೆಂದು ಯೋಚಿಸಬಹುದಾದಂಥ ಮಾರ್ಪಾಟುಗಳು, ಅಪವಾದಗಳು, ಷರತ್ತುಗಳು ಮತ್ತು ಪರಿಮಿತಿಗಳಿಗೆ ಒಳಪಟ್ಟು ಅನ್ವಯವಾಗತಕ್ಕದ್ದೆಂದು ನಿರ್ದೇಶಿಸಬಹುದು.

**13. ವಿದೇಶಿ ರಾಜ್ಯಗಳಿಂದ ಪರಾರಿ ಅಪರಾಧಿಗಳು ದಸ್ತಗಿರಿಯಾಗುವುದಕ್ಕೆ ಮತ್ತು ಹಿಂತಿರುಗಿಸುವಿಕೆಗೆ ಗುರಿಯಾಗುವುದು.**– ಈ ಅಧ್ಯಾಯವು ಅನ್ವಯವಾಗುವಂಥ ಯಾವುದೇ ವಿದೇಶಿ ರಾಜ್ಯದ ಪರಾರಿ

ಅಪರಾಧಿಯು ಭಾರತದಲ್ಲಿ ಸಿಕ್ಕಿದಲ್ಲಿ ಅವನು ಈ ಅಧ್ಯಾಯದಲ್ಲಿ ಉಪಬಂಧಿಸಿರುವ ರೀತಿಯಲ್ಲಿ ದಸ್ತಗಿರಿಯಾಗಲು ಮತ್ತು ಆ ವಿದೇಶಿ ರಾಜ್ಯಕ್ಕೆ ಹಿಂತಿರುಗಿಸಲು ಗುರಿಯಾಗತಕ್ಕದ್ದು.

**14. ಹಿಂಬರಹ ಮಾಡಿದ ಮತ್ತು ತಾತ್ಕಾಲಿಕ ವಾರಂಟುಗಳು.**- ಪರಾರಿ ಅಪರಾಧಿಯನ್ನು ಹಿಂಬರಹ ಮಾಡಿದ ವಾರಂಟು ಅಥವಾ ತಾತ್ಕಾಲಿಕ ವಾರಂಟಿನ ಮೇರೆಗೆ ಭಾರತದಲ್ಲಿ ದಸ್ತಗಿರಿ ಮಾಡಬಹುದು.

**15. ಪರಾರಿ ಅಪರಾಧಿಯ ದಸ್ತಗಿರಿಗಾಗಿ ಹಿಂಬರಹ ಮಾಡಿದ ವಾರಂಟು.**- ಈ ಅಧ್ಯಾಯವು ಅನ್ವಯವಾಗುವಂಥ ಯಾವುದೇ ವಿದೇಶಿ ರಾಜ್ಯದಲ್ಲಿ ಪರಾರಿ ಅಪರಾಧಿಯ ದಸ್ತಗಿರಿಗಾಗಿ ವಾರಂಟನ್ನು ಹೊರಡಿಸಿರುವಲ್ಲಿ ಮತ್ತು ಅಂಥ ಪರಾರಿ ಅಪರಾಧಿಯು ಭಾರತದಲ್ಲಿರುವಲ್ಲಿ ಅಥವಾ ಇರುವನೆಂದು ಶಂಕಿಸಲಾಗಿರುವಲ್ಲಿ, ಕೇಂದ್ರ ಸರ್ಕಾರವು ಆ ವಾರಂಟನ್ನು ಹೊರಡಿಸಲು ಕಾನೂನು ಸಮ್ಮತ ಅಧಿಕಾರವನ್ನು ಹೊಂದಿರುವ ವ್ಯಕ್ತಿಯು ಅದನ್ನು ಹೊರಡಿಸಿದ್ದಾನೆ ಎಂದು ಮನದಟ್ಟು ಮಾಡಿಕೊಂಡರೆ, ನಿಯಮಿಸಿದ ರೀತಿಯಲ್ಲಿ ಅಂಥ ವಾರಂಟಿನ ಮೇಲೆ ಹಿಂಬರಹ ಮಾಡತಕ್ಕದ್ದು ಮತ್ತು ಹಾಗೆ ಹಿಂಬರಹ ಮಾಡಿದ ವಾರಂಟು, ಆ ವಾರಂಟಿನಲ್ಲಿ ಹೆಸರಿಸಿದ ವ್ಯಕ್ತಿಯನ್ನು ದಸ್ತಗಿರಿ ಮಾಡಲು ಮತ್ತು ಅವನನ್ನು ಭಾರತದಲ್ಲಿ ಯಾರೇ ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸಲು ಸಾಕಷ್ಟು ಅಧಿಕಾರವಾಗಿರತಕ್ಕದು.

**16. ಪರಾರಿ ಅಪರಾಧಿಯ ದಸ್ತಗಿರಿಗಾಗಿ ತಾತ್ಕಾಲಿಕ ವಾರಂಟು.**- (1) ಯಾವ ಅಪರಾಧದ ಬಗ್ಗೆ ಪರಾರಿ ಅಪರಾಧಿಯು ಆಪಾದಿತನಾಗಿರುವನೋ ಅಥವಾ ಯಾವುದರ ಬಗ್ಗೆ ಅಪರಾಧಿ ಎಂದು ನಿರ್ಣೀತನಾಗಿರುವನೋ ಆ ಅಪರಾಧವನ್ನು ಮ್ಯಾಜಿಸ್ಟ್ರೇಟನ ಅಧಿಕಾರ ವ್ಯಾಪ್ತಿಯೊಳಗೆ ಮಾಡಿದ್ದರೆ ಆ ಮ್ಯಾಜಿಸ್ಟ್ರೇಟನ ಅಭಿಪ್ರಾಯದಲ್ಲಿ ವಾರಂಟನ್ನು ಹೊರಡಿಸಲು ಸಮರ್ಥನೀಯವಾಗುವಂಥ ಮಾಹಿತಿಯ ಮೇಲೆ ಅಥವಾ ಅಂಥ ಸಂದರ್ಭಗಳ ಮೇರೆಗೆ ಭಾರತದಲ್ಲಿ ಇರುವ ಅಥವಾ ಅಲ್ಲಿರುವುದಾಗಿ ಶಂಕಿಸಲಾಗಿರುವ ಅಥವಾ ಅವನು ಅಲ್ಲಿಗೆ ಹೋಗುವಾಗ, ಈ ಅಧ್ಯಾಯವು ಅನ್ವಯವಾಗುವಂಥ ಯಾವುದೇ ವಿದೇಶಿ ರಾಜ್ಯವು ಪರಾರಿ ಅಪರಾಧಿಯ ದಸ್ತಗಿರಿ ಮಾಡಲು ತಾತ್ಕಾಲಿಕ ವಾರಂಟನ್ನು ಯಾರೇ ಮ್ಯಾಜಿಸ್ಟ್ರೇಟನು ಹೊರಡಿಸಬಹುದು ಮತ್ತು ಅಂಥ ವಾರಂಟನ್ನು ತದನುಸಾರವಾಗಿ ಜಾರಿಗೊಳಿಸಬಹುದು.

(2) ತಾತ್ಕಾಲಿಕ ವಾರಂಟನ್ನು ಹೊರಡಿಸುವ ಮ್ಯಾಜಿಸ್ಟ್ರೇಟನು, ಕೇಂದ್ರ ಸರ್ಕಾರಕ್ಕೆ ಆ ವಾರಂಟಿನ ಬಗ್ಗೆ ಮಾಹಿತಿ ಅಥವಾ ಅದರ ಪ್ರಮಾಣೀಕೃತ ಪ್ರತಿಯೊಂದಿಗೆ ಅದನ್ನು ಹೊರಡಿಸಿರುವ ಬಗ್ಗೆ ವರದಿಯನ್ನು ತಕ್ಷಣವೇ ಕಳುಹಿಸತಕ್ಕದ್ದು ಮತ್ತು ಕೇಂದ್ರ ಸರ್ಕಾರವು ತಾನು ಸೂಕ್ತವೆಂದು ಯೋಚಿಸಿದರೆ, ಅಂಥ ವಾರಂಟಿನ ಮೇರೆಗೆ ದಸ್ತಗಿರಿ ಮಾಡಿದ ವ್ಯಕ್ತಿಯನ್ನು ವಿಮೋಚನೆ ಮಾಡಬಹುದು.

(3) ತಾತ್ಕಾಲಿಕ ವಾರಂಟಿನ ಮೇಲೆ ದಸ್ತಗಿರಿ ಮಾಡಿದ ಪರಾರಿ ಅಪರಾಧಿಯನ್ನು, ಹಿಂಬರಹ ಮಾಡಿದ ವಾರಂಟನ್ನು ಹಾಜರುಪಡಿಸುವುದಕ್ಕಾಗಿ ಅವಶ್ಯವೆಂದು ಕಂಡುಬರುವ ಸಂದರ್ಭಗಳಲ್ಲಿ, ಯಾವುದೇ ಒಂದು ಬಾರಿಗೆ ಏಳು ದಿವಸಗಳನ್ನು ಮೀರದಂಥ ಯುಕ್ತ ಕಾಲದವರೆಗೆ ವಾಪಸು ಕಳುಹಿಸಬಹುದು.

**17. ದಸ್ತಗಿರಿ ಮಾಡಿದಾಗ ಪರಾರಿ ಅಪರಾಧಿಯೊಂದಿಗೆ ವ್ಯವಹರಿಸುವುದು.**- (1) ಯಾವ ಮ್ಯಾಜಿಸ್ಟ್ರೇಟನ ಮುಂದೆ ಈ ಅಧ್ಯಾಯದ ಮೇರೆಗೆ ದಸ್ತಗಿರಿಯಾದ ವ್ಯಕ್ತಿಯನ್ನು ತರಲಾಗಿದೆಯೋ ಆ ಮ್ಯಾಜಿಸ್ಟ್ರೇಟನಿಗೆ, ವಿಚಾರಣೆಯನ್ನು ಮಾಡಿದ ಮೇಲೆ ಪರಾರಿ ಅಪರಾಧಿಯ ದಸ್ತಗಿರಿಯ ಹಿಂಬರಹ ವಾರಂಟು ಕ್ರಮಬದ್ಧವಾಗಿ ಅಧಿಪ್ರಮಾಣಿತವಾಗಿದೆ ಎಂದು ಮತ್ತು ಆ ವ್ಯಕ್ತಿಯ ಬಗ್ಗೆ ಆಪಾದಿಸಿರುವ ಅಥವಾ ಅವನು ಅಪರಾಧಿ ಎಂದು ನಿರ್ಣೀತನಾಗಿರುವಂಥ ಅಪರಾಧವು ಒಂದು ಪ್ರತ್ಯರ್ಪಣ ಅಪರಾಧವೆಂದು ಮನದಟ್ಟಾದರೆ, ಆ ಮ್ಯಾಜಿಸ್ಟ್ರೇಟನು ಆ ಪರಾರಿ ಅಪರಾಧಿಯನ್ನು ಬಂದೀಖಾನೆಗೆ ಒಪ್ಪಿಸತಕ್ಕದ್ದು ಮತ್ತು ಒಪ್ಪಿಸಿರುವಿಕೆಯ ಪ್ರಮಾಣ ಪತ್ರವನ್ನು ಕೇಂದ್ರ ಸರ್ಕಾರಕ್ಕೆ ತಕ್ಷಣ ಕಳುಹಿಸತಕ್ಕದ್ದು.

(2) ಅಂಥ ವಿಚಾರಣೆಯನ್ನು ಮಾಡಿದ ಮೇಲೆ ಆ ಮ್ಯಾಜಿಸ್ಟ್ರೇಟನು ಅವನ ಅಭಿಪ್ರಾಯದಲ್ಲಿ ಆ ಹಿಂಬರಹ ಮಾಡಿದ ವಾರಂಟನ್ನು ಕ್ರಮಬದ್ಧವಾಗಿ ಅಧಿಪ್ರಮಾಣೀಕರಿಸಿಲ್ಲವೆಂದು ಅಥವಾ ಅಂಥ ವ್ಯಕ್ತಿಯ ಬಗ್ಗೆ ಆಪಾದಿಸಿರುವಂಥ ಅಥವಾ ಅವನು ಅಪರಾಧಿ ಎಂದು ನಿರ್ಣೀತನಾಗಿರುವಂಥ ಅಪರಾಧವು

ಪ್ರತ್ಯರ್ಪಣ ಅಪರಾಧವಲ್ಲವೆಂದು ಅಭಿಪ್ರಾಯಪಟ್ಟರೆ, ಆ ಮ್ಯಾಜಿಸ್ಟ್ರೇಟನು ಕೇಂದ್ರ ಸರ್ಕಾರದ ಆದೇಶಗಳನ್ನು ಸ್ವೀಕರಿಸುವವರೆಗೆ ಅಂಥ ವ್ಯಕ್ತಿಯನ್ನು ಅಭಿರಕ್ಷೆಯಲ್ಲಿ ತಡೆಹಿಡಿದಿಟ್ಟಿರಬಹುದು ಅಥವಾ ಅವನನ್ನು ಜಾಮಿನಿನ ಮೇಲೆ ಬಿಡುಗಡೆ ಮಾಡಬಹುದು.

(3) ಈ ಮ್ಯಾಜಿಸ್ಟ್ರೇಟನು ಕೇಂದ್ರ ಸರ್ಕಾರಕ್ಕೆ ಅವನು ಮಾಡಿದ ವಿಚಾರಣೆಯ ಫಲಿತಾಂಶವನ್ನು ವರದಿ ಮಾಡತಕ್ಕದ್ದು ಮತ್ತು ಅಂಥ ವರದಿಯೊಂದಿಗೆ ಆ ಸರ್ಕಾರದ ಪರ್ಯಾಲೋಚನೆಗಾಗಿ ಒಪ್ಪಿಸಲು ಆ ಪರಾರಿ ಅಪರಾಧಿಯು ಇಚ್ಛಿಸಬಹುದಾದಂಥ ಯಾವುದೇ ಲಿಖಿತ ಹೇಳಿಕೆಯನ್ನು ಕಳುಹಿಸತಕ್ಕದ್ದು.

**18. ಪರಾರಿ ಅಪರಾಧಿಯನ್ನು ವಾರಂಟಿನ ಮೂಲಕ ಹಿಂತಿರುಗಿಸುವುದು.-** ಕೇಂದ್ರ ಸರ್ಕಾರವು, ಈ ಅಧ್ಯಾಯದ ಮೇರೆಗೆ ಪರಾರಿ ಅಪರಾಧಿಯನ್ನು ಬಂದೀಖಾನೆಗೆ ಒಪ್ಪಿಸಿದ ತರುವಾಯ ಯಾವುದೇ ಕಾಲದಲ್ಲಿ ಆ ಪರಾರಿ ಅಪರಾಧಿಯ ಬಗ್ಗೆ ಅಭಿರಕ್ಷೆಗಾಗಿ ಮತ್ತು ಸಂಬಂಧಪಟ್ಟ ವಿದೇಶಿ ರಾಜ್ಯಕ್ಕೆ ಹಿಂದಿರುಗಿಸುವುದಕ್ಕಾಗಿ ಮತ್ತು ವಾರಂಟಿನಲ್ಲಿ ಹೆಸರಿಸಬೇಕಾದ ಸ್ಥಳದಲ್ಲಿ ಮತ್ತು ವ್ಯಕ್ತಿಗೆ ಅವನನ್ನು ವಶಕ್ಕೆ ಒಪ್ಪಿಸಲು ವಾರಂಟನ್ನು ಹೊರಡಿಸಬಹುದು.

## ಅಧ್ಯಾಯ - IV

## ವಿದೇಶಿ ರಾಜ್ಯಗಳಿಂದ ಆಪಾದಿತ ಅಥವಾ ಅಪರಾಧಿ ಎಂದು ನಿರ್ಣೀತರಾದ ವ್ಯಕ್ತಿಗಳನ್ನು ವಶಕ್ಕೆ ಒಪ್ಪಿಸುವುದು ಅಥವಾ ಹಿಂದಿರುಗಿಸುವುದು

**19. ವಿದೇಶೀ ರಾಜ್ಯದಲ್ಲಿ ಇರುವ ಆಪಾದಿತ ಅಥವಾ ಅಪರಾಧಿ ಎಂದು ನಿರ್ಣೀತನಾದ ವ್ಯಕ್ತಿಯನ್ನು ಭಾರತಕ್ಕೆ ಒಪ್ಪಿಸುವುದು ಅಥವಾ ಹಿಂತಿರುಗಿಸುವುದಕ್ಕಾಗಿ ಕೋರಿಕೆಯ ವಿಧಾನ ಅಥವಾ ವಾರಂಟಿನ ನಮೂನೆ.-** (1) ಭಾರತದಲ್ಲಿ ಮಾಡಿರುವ ಪ್ರತ್ಯರ್ಪಣ ಅಪರಾಧದ ಬಗ್ಗೆ ಆಪಾದಿತನಾದ ಅಥವಾ ಅದಕ್ಕಾಗಿ ಅಪರಾಧಿ ಎಂದು ನಿರ್ಣೀತನಾದ ಮತ್ತು IIIನೇ ಅಧ್ಯಾಯವು ಅನ್ವಯವಾಗದಿರುವಂಥ ಯಾವುದೇ ವಿದೇಶೀ ರಾಜ್ಯದಲ್ಲಿ ಇರುವ ಅಥವಾ ಇರುವನೆಂದು ಶಂಕಿಸಲಾಗಿರುವ ವ್ಯಕ್ತಿಯನ್ನು ವಶಕ್ಕೆ ಒಪ್ಪಿಸುವುದಕ್ಕಾಗಿ ಕೋರಿಕೆಯನ್ನು ಕೇಂದ್ರ ಸರ್ಕಾರವು,-

(ಎ) ದೆಹಲಿಯಲ್ಲಿರುವ ಆ ರಾಜ್ಯದ ರಾಜತಾಂತ್ರಿಕ ಪ್ರತಿನಿಧಿಗೆ; ಅಥವಾ

(ಬಿ) ಆ ರಾಜ್ಯದಲ್ಲಿರುವ, ಭಾರತದ ರಾಜತಾಂತ್ರಿಕ ಪ್ರತಿನಿಧಿಯ ಮೂಲಕ ಆ ರಾಜ್ಯದ ಸರ್ಕಾರಕ್ಕೆ

- ಮಾಡಿಕೊಳ್ಳಬಹುದು ಮತ್ತು ಈ ಎರಡೂ ವಿಧಾನಗಳು ಅನುಕೂಲಕರವಾಗಿರದಿದ್ದರೆ, ಭಾರತ ಸರ್ಕಾರವು ಆ ರಾಜ್ಯದೊಂದಿಗೆ ಮಾಡಿಕೊಂಡ ವ್ಯವಸ್ಥೆಯ ಮೂಲಕ ಇತ್ಯರ್ಥವಾಗಿರುವಂಥ ಇತರ ವಿಧಾನದಲ್ಲಿ ಆ ಕೋರಿಕೆಯನ್ನು ಮಾಡಿಕೊಳ್ಳತಕ್ಕದ್ದು.

(2) IIIನೇ ಅಧ್ಯಾಯವು ಅನ್ವಯವಾಗುವಂಥ ಯಾವುದೇ ವಿದೇಶಿ ರಾಜ್ಯದಲ್ಲಿ ಇರುವ ಅಥವಾ ಇರುವನೆಂದು ಶಂಕಿಸಲಾಗಿರುವ ಯಾರೇ ವ್ಯಕ್ತಿಯ ದಸ್ತಗಿರಿಗಾಗಿ ಭಾರತದಲ್ಲಿ ಮ್ಯಾಜಿಸ್ಟ್ರೇಟನು ಹೊರಡಿಸಿದ ವಾರಂಟು ನಿಯಮಿಸಬಹುದಾದ ನಮೂನೆಯಲ್ಲಿರತಕ್ಕದ್ದು.

**20. ವಶಕ್ಕೆ ಒಪ್ಪಿಸಲಾದ ಅಥವಾ ಹಿಂತಿರುಗಿಸಲಾದ ಆಪಾದಿತ ಅಥವಾ ಅಪರಾಧಿ ಎಂದು ನಿರ್ಣೀತನಾದ ವ್ಯಕ್ತಿಯನ್ನು ಸಾಗಿಸುವುದು.-** ವಿದೇಶೀ ರಾಜ್ಯವು ಒಪ್ಪಿಸಿರುವ ಅಥವಾ ಹಿಂತಿರುಗಿಸಿರುವ, ಪ್ರತ್ಯರ್ಪಣ ಅಪರಾಧದ ಆಪಾದಿತನಾಗಿರುವ ಅಥವಾ ಅಪರಾಧಿ ಎಂದು ನಿರ್ಣೀತನಾಗಿರುವ ಯಾರೇ ವ್ಯಕ್ತಿಯನ್ನು, ಅವನನ್ನು ವಶಕ್ಕೆ ಒಪ್ಪಿಸಬೇಕೆಂದು ಅಥವಾ ಹಿಂದಿರುಗಿಸಬೇಕೆಂದು ಅಂಥ ರಾಜ್ಯದಲ್ಲಿ ಹೊರಡಿಸಿದ ದಸ್ತಗಿರಿಯ ವಾರಂಟಿನ ಮೇರೆಗೆ, ಭಾರತದೊಳಗೆ ತರಬಹುದು ಮತ್ತು ಕಾನೂನಿಗನುಸಾರವಾಗಿ ವ್ಯವಹರಿಸಲು ಅವನನ್ನು ಸೂಕ್ತ ಪ್ರಾಧಿಕಾರಕ್ಕೆ ವಶಾವಣೆ ಮಾಡಬಹುದು.

**21. ವಿದೇಶೀ ರಾಜ್ಯವು ವಶಕ್ಕೊಪ್ಪಿಸಿದ ಅಥವಾ ಹಿಂತಿರುಗಿಸಿದ ಆಪಾದಿತನನ್ನು ಅಥವಾ ಅಪರಾಧಿಯೆಂದು ನಿರ್ಣೀತನಾದ ವ್ಯಕ್ತಿಯನ್ನು ಕೆಲವೊಂದು ಅಪರಾಧಗಳಿಗಾಗಿ ಅಧಿವಿಚಾರಣೆ ಮಾಡತಕ್ಕುದ್ದಲ್ಲ.-** ಯಾವ ಅಪರಾಧವನ್ನು ಭಾರತದಲ್ಲಿ ಮಾಡಿದ್ದರೆ, ಪ್ರತ್ಯರ್ಪಣ ಅಪರಾಧವಾಗುತ್ತಿದ್ದಿತೋ

ಆ ಅಪರಾಧದ ಆಪಾದಿತನಾದ ಅಥವಾ ಅಪರಾಧಿ ಎಂದು ನಿರ್ಣೀತನಾದ ಯಾರೇ ವ್ಯಕ್ತಿಯನ್ನು, ವಿದೇಶೀ ರಾಜ್ಯವು ವಶಕ್ಕೆ ಒಪ್ಪಿಸಿದಾಗ ಅಥವಾ ಹಿಂತಿರುಗಿಸಿದಾಗ ಅಂಥ ವ್ಯಕ್ತಿಯನ್ನು, ಆ ರಾಜ್ಯಕ್ಕೆ ಅವನನ್ನು ವಾಪಸ್ಸು ಕಳುಹಿಸುವವರೆಗೆ ಅಥವಾ ಹಿಂದಿರುಗುವ ಅವಕಾಶ ಅವನಿಗೆ ಸಿಗುವವರೆಗೆ,-

(ಎ) ಯಾವ ಅಪರಾಧಕ್ಕೆ ಸಂಬಂಧಿಸಿದಂತೆ ಅವನನ್ನು ವಶಕ್ಕೆ ಒಪ್ಪಿಸಲಾಗಿದೆಯೋ ಅಥವಾ ಹಿಂದಿರುಗಿಸಲಾಗಿದೆಯೋ, ಆ ಪ್ರತ್ಯರ್ಪಣ ಅಪರಾಧವಲ್ಲದ ಅಪರಾಧದ ಬಗ್ಗೆ; ಅಥವಾ

(ಬಿ) ಯಾವ ಅಪರಾಧಕ್ಕೆ ಸಂಬಂಧಿಸಿದಂತೆ ಅವನನ್ನು ವಶಕ್ಕೆ ಒಪ್ಪಿಸುವುದಕ್ಕೆ ಅಥವಾ ಹಿಂದಿರುಗಿಸುವುದಕ್ಕೆ ಕಾನೂನುಸಮ್ಮತವಾಗಿ ಆದೇಶವನ್ನು ಮಾಡಲು ಆಗಿಲ್ಲವೋ, ಆ ಅಪರಾಧವಲ್ಲದ ಬೇರೆ ಅಪರಾಧದ ಬಗ್ಗೆ ಅವನನ್ನು ವಶಕ್ಕೆ ಒಪ್ಪಿಸುವಂತೆ ಮಾಡುವ ಅಥವಾ ಅವನನ್ನು ಹಿಂದಿರುಗಿಸುವಂತೆ ಮಾಡುವ ಉದ್ದೇಶಗಳಿಗಾಗಿ ರುಜುವಾತಾದ ಸಂಗತಿಗಳಿಂದ ಬಹಿರಂಗಗೊಂಡ ಯಾವುದೇ ಕಡಿಮೆ ಅಪರಾಧದ ಬಗ್ಗೆ; ಅಥವಾ

(ಸಿ) ಯಾವ ಅಪರಾಧಕ್ಕೆ ವಿದೇಶೀ ರಾಜ್ಯವು ತನ್ನ ಸಮ್ಮತಿಯನ್ನು ಕೊಟ್ಟಿರುವುದೋ ಆ ಅಪರಾಧವಲ್ಲದ ಅಪರಾಧದ ಬಗ್ಗೆ

– ಭಾರತದಲ್ಲಿ ಅಧಿವಿಚಾರಣೆ ಮಾಡತಕ್ಕದ್ದಲ್ಲ.

## ಅಧ್ಯಾಯ – V

### ಸಂಕೀರ್ಣ

**22. ಪರಾರಿ ಅಪರಾಧಿಗಳು ದಸ್ತಗಿರಿಗೆ ಮತ್ತು ವಶಕ್ಕೆ ಒಪ್ಪಿಸುವುದಕ್ಕೆ ಅಥವಾ ಹಿಂತಿರುಗಿಸುವುದಕ್ಕೆ ಗುರಿಯಾಗುವುದು.**- ವಿದೇಶೀ ರಾಜ್ಯದ ಪ್ರತಿಯೊಬ್ಬ ಪರಾರಿ ಅಪರಾಧಿಯು ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಯಾವ ಅಪರಾಧಕ್ಕೆ ಸಂಬಂಧಿಸಿದಂತೆ ಅವನನ್ನು ವಶಕ್ಕೆ ಒಪ್ಪಿಸಬೇಕೆಂದು ಅಥವಾ ಹಿಂತಿರುಗಿಸಬೇಕೆಂದು ಕೋರಲಾಗಿದೆಯೋ ಆ ಅಪರಾಧವನ್ನು ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಅಥವಾ ತರುವಾಯದಲ್ಲಿ ಮಾಡಿದ್ದಿರಲಿ ಅಥವಾ ಆ ಅಪರಾಧವನ್ನು ಅಧಿವಿಚಾರಣೆ ಮಾಡಲು ಭಾರತದಲ್ಲಿ ಇರುವ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿಯು ಇರಲಿ ಅಥವಾ ಇಲ್ಲದಿರಲಿ ದಸ್ತಗಿರಿಯಾಗುವುದಕ್ಕೆ ಮತ್ತು ವಶಕ್ಕೆ ಒಪ್ಪಿಸುವುದಕ್ಕೆ ಅಥವಾ ಹಿಂತಿರುಗಿಸುವುದಕ್ಕೆ ಗುರಿಯಾಗತಕ್ಕುದು.

**23. ಸಮುದ್ರದ ಮೇಲೆ ಅಥವಾ ಆಕಾಶದಲ್ಲಿ ಮಾಡಿದ ಅಪರಾಧಗಳ ಬಗ್ಗೆ ಅಧಿಕಾರ ವ್ಯಾಪ್ತಿ.**- ಯಾವ ಅಪರಾಧಕ್ಕೆ ಸಂಬಂಧಿಸಿದಂತೆ ಪರಾರಿ ಅಪರಾಧಿಯನ್ನು ಒಪ್ಪಿಸಬೇಕೆಂದು ಅಥವಾ ಹಿಂತಿರುಗಿಸಬೇಕೆಂದು ಕೋರಲಾಗಿದೆಯೋ ಆ ಅಪರಾಧವನ್ನು ಭಾರತದ ಯಾವುದೇ ಬಂದರಿಗೆ ಬರುವಂಥ ಯಾವುದೇ ನೌಕೆಯಲ್ಲಿ, ಅದು ಮಧ್ಯಸಾಗರದಲ್ಲಿರುವಾಗ, ಅಥವಾ ಭಾರತದ ಯಾವುದೇ ವಿಮಾನ ನಿಲ್ದಾಣಕ್ಕೆ ಬರುವಂಥ ವಿಮಾನದಲ್ಲಿ, ಭಾರತದ ಹೊರಗೆ ಅಥವಾ ಭಾರತದ ರಾಜ್ಯ ಕ್ಷೇತ್ರೀಯ ಸಮುದ್ರದ ಆಚೆಗೆ, ಆಕಾಶದಲ್ಲಿರುವಾಗ ಮಾಡಿರುವಲ್ಲಿ, ಅಂಥ ಬಂದರು ಅಥವಾ ವಿಮಾನ ನಿಲ್ದಾಣದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಯಾರೇ ಮ್ಯಾಜಿಸ್ಟ್ರೇಟನು ಈ ಅಧಿನಿಯಮದ ಮೂಲಕ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಬಹುದು.

**24. ಎರಡು ತಿಂಗಳುಗಳೊಳಗೆ ವಶಕ್ಕೆ ಒಪ್ಪಿಸದಿದ್ದರೆ ಅಥವಾ ಹಿಂತಿರುಗಿಸದಿದ್ದರೆ ದಸ್ತಗಿರಿಯಾದ ವ್ಯಕ್ತಿಯ ವಿಮೋಚನೆ.**- ಈ ಅಧಿನಿಯಮದ ಅನುಸಾರ ಯಾವುದೇ ವಿದೇಶೀ ರಾಜ್ಯಕ್ಕೆ ಅವನನ್ನು ವಶಕ್ಕೆ ಒಪ್ಪಿಸುವುದನ್ನು ಅಥವಾ ಹಿಂತಿರುಗಿಸುವುದನ್ನು ನಿರೀಕ್ಷಿಸಿ ಬಂದೀಖಾನೆಗೆ ಒಪ್ಪಿಸಿರುವ ಪರಾರಿ ಅಪರಾಧಿಯನ್ನು ಹಾಗೆ ಒಪ್ಪಿಸಿದ ತರುವಾಯ ಎರಡು ತಿಂಗಳೊಳಗೆ ಭಾರತದ ಹೊರಕ್ಕೆ ಸಾಗಿಸಿಲ್ಲದಿದ್ದರೆ, ಉಚ್ಚ ನ್ಯಾಯಾಲಯವು, ಪರಾರಿ ಅಪರಾಧಿಯು ಅಥವಾ ಅವನ ಪರವಾಗಿ ಅದಕ್ಕೆ ಮಾಡಿಕೊಂಡ ಅರ್ಜಿಯ ಮೇಲೆ ಮತ್ತು ಅಂಥ ಅರ್ಜಿಯನ್ನು ಮಾಡಿಕೊಳ್ಳುವ ಉದ್ದೇಶದ ಬಗ್ಗೆ ಯುಕ್ತ ನೋಟೀಸನ್ನು ಕೇಂದ್ರ ಸರ್ಕಾರಕ್ಕೆ ಕೊಡಲಾಗಿದೆ ಎಂದು ರುಜುವಾತುಪಡಿಸಿದ ಮೇಲೆ ತದ್ವಿರುದ್ಧವಾಗಿ ಸಾಕಷ್ಟು ಕಾರಣವನ್ನು ತೋರಿಸಿದ ಹೊರತು ಅಂಥ ಬಂದಿಯನ್ನು ವಿಮೋಚನೆಗೊಳಿಸಲು ಆದೇಶಿಸಬಹುದು.

**25. ದಸ್ತಗಿರಿಯಾದ ವ್ಯಕ್ತಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡುವುದು.**- ಈ ಅಧಿನಿಯಮದ ಮೇರೆಗೆ ದಸ್ತಗಿರಿ ಮಾಡಿರುವ ಅಥವಾ ಬಂಧಿಸಿರುವ ಪರಾರಿ ಅಪರಾಧಿಯಾಗಿರುವ ವ್ಯಕ್ತಿಯ ಸಂದರ್ಭದಲ್ಲಿ ಜಾಮೀನಿಗೆ ಸಂಬಂಧಪಟ್ಟ ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಉಪಬಂಧಗಳು, ಅವನು ಆಪಾದಿತನಾಗಿರುವಂಥ ಅಥವಾ ಅವನು ಅಪರಾಧಿ ಎಂದು ನಿರ್ಣೀತನಾಗಿರುವಂಥ ಅಪರಾಧವನ್ನು ಅಂಥ ವ್ಯಕ್ತಿಯು ಭಾರತದಲ್ಲಿ ಮಾಡಿರುವನೆಂದು ಆಪಾದಿಸಿದ್ದರೆ ಅವು ಅನ್ವಯವಾಗುವಂಥದೇ ರೀತಿಯಲ್ಲಿ ಅನ್ವಯವಾಗತಕ್ಕುದು ಮತ್ತು ಅಂಥ ಜಾಮೀನಿಗೆ ಸಂಬಂಧಪಟ್ಟಂತೆ ಆ ಪರಾರಿ ಅಪರಾಧಿಯನ್ನು ಯಾವ ಮ್ಯಾಜಿಸ್ಟ್ರೇಟನ ಮುಂದೆ ತರಲಾಗಿದೆಯೋ ಆ ಮ್ಯಾಜಿಸ್ಟ್ರೇಟನು ಸಾಧ್ಯವಾಗಬಹುದಾದಷ್ಟರ ಮಟ್ಟಿಗೆ ಆ ಸಂಹಿತೆಯ ಮೇರೆಗೆ ಸೆಷನ್ಸ್ ನ್ಯಾಯಾಲಯವು ಹೊಂದಿರುವಂಥದೇ ಅಧಿಕಾರಗಳು ಮತ್ತು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದು.

**26. ಪ್ರತ್ಯರ್ಪಣ ಅಪರಾಧಗಳ ಬಗ್ಗೆ ದುಷ್ಪ್ರೇರಣೆ.**- ಯಾವುದೇ ಪ್ರತ್ಯರ್ಪಣ ಅಪರಾಧವನ್ನು ಮಾಡಲು ದುಷ್ಪ್ರೇರಣೆಮಾಡಿರುವನೆಂದು, ಒಳಸಂಚು ಮಾಡಿದ್ದಾನೆಂದು, ಮಾಡಲು ಪ್ರಯತ್ನಿಸಿದ್ದಾನೆಂದು, ಪ್ರಚೋದಿಸಿದ್ದಾನೆಂದು ಅಥವಾ ಸಹಾಯಕನಾಗಿ ಭಾಗಿಯಾಗಿದ್ದಾನೆಂದು ಆಪಾದಿತನಾಗಿರುವ ಅಥವಾ ಅಪರಾಧಿ ಎಂದು ನಿರ್ಣೀತನಾಗಿರುವ ಪರಾರಿ ಅಪರಾಧಿಯನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಅಂಥ ಅಪರಾಧವನ್ನು ಮಾಡಿರುವ ಆಪಾದಿತನೆಂದು ಅಥವಾ ಅಪರಾಧಿ ಎಂದು ನಿರ್ಣೀತನಾಗಿರುವುದಾಗಿ ಭಾವಿಸತಕ್ಕುದು ಮತ್ತು ಅವನು ತದನುಸಾರವಾಗಿ ದಸ್ತಗಿರಿ ಆಗಲು ಮತ್ತು ವಶಕ್ಕೆ ಒಪ್ಪಿಸುವುದಕ್ಕಾಗಿ ಗುರಿಯಾಗತಕ್ಕದ್ದು.

**27. ವಾರಂಟುಗಳ ಮೇರೆಗಿನ ಅಭಿರಕ್ಷೆಯ ಕಾನೂನುಸಮ್ಮತತೆ ಮತ್ತು ಅಭಿರಕ್ಷೆಯಿಂದ ತಪ್ಪಿಸಿಕೊಂಡಾಗ ಪುನಃ ಹಿಡಿಯುವುದು.**- ಪರಾರಿ ಅಪರಾಧಿಯ ದಸ್ತಗಿರಿಗಾಗಿ ಯಾರಿಗೆ ವಾರಂಟನ್ನು ಹೊರಡಿಸಲಾಗಿದೆಯೋ ಆ ಯಾರೇ ವ್ಯಕ್ತಿಯು ಆ ವಾರಂಟಿನಲ್ಲಿ ನಮೂದಿಸಿದ ವ್ಯಕ್ತಿಯನ್ನು ಅಭಿರಕ್ಷೆಯಲ್ಲಿ ಇಟ್ಟುಕೊಳ್ಳುವುದು ಮತ್ತು ಆ ವಾರಂಟಿನಲ್ಲಿ ಹೆಸರಿಸಿದ ಸ್ಥಳಕ್ಕೆ ಸಾಗಿಸುವುದು ಕಾನೂನು ಸಮ್ಮತವಾಗಿರತಕ್ಕದ್ದು, ಮತ್ತು ಅಂಥ ವ್ಯಕ್ತಿಯು ಅಂಥ ವಾರಂಟಿಗೆ ಅನುಸಾರವಾಗಿ ಅವನನ್ನು ವಶದಲ್ಲಿಟ್ಟಿರಬಹುದಾದಂಥ ಯಾವುದೇ ಅಭಿರಕ್ಷೆಯಿಂದ ತಪ್ಪಿಸಿಕೊಂಡರೆ, ಅವನನ್ನು, ಭಾರತದ ಕಾನೂನಿನ ವಿರುದ್ಧದ ಅಪರಾಧದ ಆಪಾದಿತನಾದ ವ್ಯಕ್ತಿಯು ತಪ್ಪಿಸಿಕೊಂಡ ಮೇಲೆ ಅಂಥವನನ್ನು ಪುನಃ ಹಿಡಿಯಬಹುದಾದಂತೆಯೇ ಹಿಡಿಯಬಹುದು.

**28. ಪರಾರಿ ಅಪರಾಧಿಯ ಬಳಿ ಸಿಕ್ಕ ಸ್ವತ್ತು.**- ಪ್ರತ್ಯರ್ಪಣ ಅಪರಾಧವನ್ನು ರುಜುವಾತುಪಡಿಸುವಲ್ಲಿ ಸಾಕ್ಷ್ಯವಾಗಿ ಮುಖ್ಯವಾಗಿರಬಹುದಾದಂಥ ಮತ್ತು ದಸ್ತಗಿರಿಯ ಕಾಲದಲ್ಲಿ ಪರಾರಿ ಅಪರಾಧಿಯ ಸ್ವಾಧೀನದಲ್ಲಿ ಇರುವ ಪ್ರತಿಯೊಂದು ವಸ್ತುವನ್ನು ಅದಕ್ಕೆ ಸಂಬಂಧಿಸಿದಂತೆ ಅನ್ಯ ಪಕ್ಷಕಾರರ ಹಕ್ಕುಗಳು ಯಾವುದಾದರೂ ಇದ್ದರೆ ಅವುಗಳಿಗೆ ಒಳಪಟ್ಟು, ಅವನನ್ನು ವಶಕ್ಕೆ ಒಪ್ಪಿಸಿದಾಗ ಅಥವಾ ಹಿಂತಿರುಗಿಸಿದಾಗ ಆ ಪರಾರಿ ಅಪರಾಧಿಯೊಂದಿಗೆ, ಒಪ್ಪಿಸಬಹುದು.

**29. ಯಾರೇ ಪರಾರಿ ಅಪರಾಧಿಯನ್ನು ವಿಮೋಚನೆಗೊಳಿಸಲು ಕೇಂದ್ರ ಸರ್ಕಾರದ ಅಧಿಕಾರ.**- ಕೇಂದ್ರ ಸರ್ಕಾರಕ್ಕೆ, ಆ ಪ್ರಕರಣದ ಕ್ಷುಲ್ಲಕ ಸ್ವರೂಪದ ಕಾರಣದಿಂದಾಗಿ ಅಥವಾ ಪರಾರಿ ಅಪರಾಧಿಯನ್ನು ವಶಕ್ಕೆ ಒಪ್ಪಿಸುವ ಅಥವಾ ಹಿಂತಿರುಗಿಸುವುದಕ್ಕಾಗಿ ಅರ್ಜಿಯನ್ನು ಸದ್ಭಾವನೆಯಿಂದ ಅಥವಾ ನ್ಯಾಯೋದ್ದೇಶದಿಂದ ಮಾಡಿಲ್ಲದೆ ಇರುವ ಕಾರಣದಿಂದಾಗಿ ಅಥವಾ ರಾಜಕೀಯ ಕಾರಣಗಳಿಗಾಗಿ ಅಥವಾ ಅನ್ಯಥಾ, ಪರಾರಿ ಅಪರಾಧಿಯನ್ನು ಒಪ್ಪಿಸುವುದು ಅಥವಾ ಹಿಂತಿರುಗಿಸುವುದು ಅನ್ಯಾಯವೆಂದು ಅಥವಾ ವಿಹಿತವಲ್ಲವೆಂದು ಕಂಡುಬಂದರೆ, ಅದು ಆದೇಶದ ಮೂಲಕ ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಗಳನ್ನು ಯಾವುದೇ ಕಾಲದಲ್ಲಿ ತಡೆಹಿಡಿಯಬಹುದು ಮತ್ತು ಈ ಅಧಿನಿಯಮದ ಮೇರೆಗೆ ಹೊರಡಿಸಿರುವ ಅಥವಾ ಹಿಂಬರಹ ಮಾಡಿರುವ ಯಾವುದೇ ವಾರಂಟನ್ನು ರದ್ದುಪಡಿಸಬೇಕೆಂದು ಮತ್ತು ಯಾರ ದಸ್ತಗಿರಿಗಾಗಿ ಆ ವಾರಂಟನ್ನು ಹೊರಡಿಸಲಾಗಿದೆಯೋ ಅಥವಾ ಹಿಂಬರಹ ಮಾಡಲಾಗಿದೆಯೋ ಆ ವ್ಯಕ್ತಿಯನ್ನು ವಿಮೋಚನೆಗೊಳಿಸಬೇಕೆಂದು ನಿರ್ದೇಶಿಸಬಹುದು.

**30. ಏಕಕಾಲದಲ್ಲಿ ಮಾಡಿಕೊಂಡ ಕೋರಿಕೆಗಳು.**- ಪರಾರಿ ಅಪರಾಧಿಯನ್ನು ಒಪ್ಪಿಸುವುದಕ್ಕಾಗಿ ಒಂದಕ್ಕಿಂತ ಹೆಚ್ಚು ವಿದೇಶೀ ರಾಜ್ಯದಿಂದ ಕೋರಿಕೆಗಳನ್ನು ಸ್ವೀಕರಿಸಿದ್ದರೆ, ಕೇಂದ್ರ ಸರ್ಕಾರವು ಆ ಪ್ರಕರಣದ ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು ಆ ಪರಾರಿ ಅಪರಾಧಿಯನ್ನು ಆ ಸರ್ಕಾರವು ಸೂಕ್ತವೆಂದು ಯೋಚಿಸುವಂಥ ರಾಜ್ಯಕ್ಕೆ ಒಪ್ಪಿಸಬಹುದು.

**31. ವಶಕ್ಕೆ ಒಪ್ಪಿಸುವುದರ ಮೇಲೆ ನಿರ್ಬಂಧಗಳು.**- (1) ಪರಾರಿ ಅಪರಾಧಿಯನ್ನು-

(ಎ) ಯಾವ ಅಪರಾಧಕ್ಕೆ ಸಂಬಂಧಿಸಿದಂತೆ ಅವನನ್ನು ವಶಕ್ಕೆ ಒಪ್ಪಿಸಬೇಕೆಂದು ಕೋರಲಾಗಿದೆಯೋ ಆ ಅಪರಾಧವು ರಾಜಕೀಯ ಸ್ವರೂಪದ್ದಾಗಿದ್ದರೆ, ಅಥವಾ ಅವನನ್ನು ಹಾಜರುಪಡಿಸಬಹುದಾದ ಮ್ಯಾಜಿಸ್ಟ್ರೇಟ್ ಅಥವಾ ನ್ಯಾಯಾಲಯ ಅಥವಾ ಕೇಂದ್ರ ಸರ್ಕಾರಕ್ಕೆ ಮನದಟ್ಟಾಗುವಂತೆ ಅವನನ್ನು ವಶಕ್ಕೆ ಒಪ್ಪಿಸುವ ಬಗ್ಗೆ ಮಾಡಿಕೊಂಡ ಕೋರಿಕೆಯನ್ನು ಅಥವಾ ಹೊರಡಿಸಿದ ವಾರಂಟನ್ನು ರಾಜಕೀಯ ಸ್ವರೂಪದ ಅಪರಾಧಕ್ಕಾಗಿ ತನ್ನನ್ನು ಅಧಿವಿಚಾರಣೆ ಮಾಡುವ ಅಥವಾ ಶಿಕ್ಷೆಗೆ ಒಳಪಡಿಸುವ ದೃಷ್ಟಿಯಿಂದ ವಾಸ್ತವವಾಗಿ ಮಾಡಲಾಗಿದೆ ಅಥವಾ ಹೊರಡಿಸಲಾಗಿದೆ ಎಂದು ಅವನು ರುಜುವಾತು ಮಾಡಿದರೆ;

(ಬಿ) ಯಾವುದಕ್ಕೆ ಸಂಬಂಧಿಸಿದಂತೆ ಅವನನ್ನು ವಶಕ್ಕೆ ಒಪ್ಪಿಸಬೇಕೆಂದು ಕೋರಲಾಗಿದೆಯೋ ಆ ಅಪರಾಧಕ್ಕಾಗಿನ ಪ್ರಾಸಿಕ್ಯೂಷನ್ನು ಆ ರಾಜ್ಯ ಅಥವಾ ದೇಶದ ಕಾನೂನಿಗನುಸಾರವಾಗಿ ವಾಯಿದೆಯಿಂದಾಗಿ ಪ್ರತಿಷೇಧಿತವಾಗಿದ್ದರೆ;

(ಸಿ) ವಿದೇಶೀ ರಾಜ್ಯದ ಆ ಕಾನೂನಿನ ಮೂಲಕ ಅಥವಾ ವಿದೇಶೀ ರಾಜ್ಯದೊಂದಿಗೆ ಮಾಡಿಕೊಂಡಿರುವ ಪ್ರತ್ಯರ್ಪಣ ಕೌಲಿನಲ್ಲಿ, ಪರಾರಿ ಅಪರಾಧಿಯನ್ನು,-

(i) ಯಾವ ಅಪರಾಧಕ್ಕೆ ಸಂಬಂಧಿಸಿದಂತೆ ಅವನನ್ನು ವಶಕ್ಕೊಪ್ಪಿಸಬೇಕಾಗಿದೆಯೋ ಅಥವಾ ಹಿಂದಿರುಗಿಸಬೇಕಾಗಿದೆಯೋ ಆ ಪ್ರತ್ಯರ್ಪಣ ಅಪರಾಧವಲ್ಲದ; ಅಥವಾ

(ii) ಯಾವ ಅಪರಾಧಕ್ಕೆ ಸಂಬಂಧಿಸಿದಂತೆ ಅವನನ್ನು ವಶಕ್ಕೆ ಒಪ್ಪಿಸುವುದಕ್ಕೆ ಅಥವಾ ಹಿಂದಿರುಗಿಸುವುದಕ್ಕೆ ಕಾನೂನು ಸಮ್ಮತವಾಗಿ ಆದೇಶವನ್ನು ಮಾಡಲು ಆಗಿಲ್ಲವೋ ಆ ಅಪರಾಧವಲ್ಲದ ಬೇರೆ ಅಪರಾಧದ ಬಗ್ಗೆ, ಅವನನ್ನು ವಶಕ್ಕೆ ಒಪ್ಪಿಸುವಂತೆ ಮಾಡುವ ಅಥವಾ ಅವನನ್ನು ಹಿಂದಿರುಗಿಸುವಂತೆ ಮಾಡುವ ಉದ್ದೇಶಗಳಿಗಾಗಿ ರುಜುವಾತಾದ ಸಂಗತಿಗಳಿಂದ ಬಹಿರಂಗಗೊಂಡ ಯಾವುದೇ ಕಡಿಮೆ ಅಪರಾಧದ ಬಗ್ಗೆ; ಅಥವಾ

(iii) ಯಾವ ಅಪರಾಧಕ್ಕೆ ಕೇಂದ್ರ ಸರ್ಕಾರವು ತನ್ನ ಸಮ್ಮತಿಯನ್ನು ಕೊಟ್ಟಿರುವುದೋ ಆ ಅಪರಾಧವಲ್ಲದ

- ಅಪರಾಧದ ಬಗ್ಗೆ ಆ ರಾಜ್ಯದಲ್ಲಿ ನಿರ್ಣಯಿಸತಕ್ಕದ್ದಲ್ಲವೆಂದು ಅಥವಾ ಅಧಿವಿಚಾರಣೆ ಮಾಡತಕ್ಕದ್ದಲ್ಲವೆಂದು ಉಪಬಂಧಿಸಿದ ಹೊರತು;

(ಡಿ) ಯಾವ ಅಪರಾಧಕ್ಕಾಗಿ ಅವನನ್ನು ಒಪ್ಪಿಸಬೇಕೆಂದು ಅಥವಾ ಹಿಂದಿರುಗಿಸಬೇಕೆಂದು ಕೋರಲಾಗಿದೆಯೋ ಆ ಅಪರಾಧವಲ್ಲದ ಬೇರೆ ಅಪರಾಧದ ಬಗ್ಗೆ ಅವನು ಭಾರತದಲ್ಲಿ ಆಪಾದಿತನಾಗಿದ್ದರೆ ಅಥವಾ ಭಾರತದಲ್ಲಿ ಯಾವುದೇ ಅಪರಾಧ ನಿರ್ಣಯದ ಮೇರೆಗೆ ಶಿಕ್ಷೆಯನ್ನು ಅನುಭವಿಸುತ್ತಿದ್ದರೆ, ಖುಲಾಸೆಯ ಮೂಲಕವಾಗಿಯೇ ಆಗಲಿ ಅಥವಾ ಶಿಕ್ಷೆಯು ಮುಕ್ತಾಯವಾದ ಮೇಲೆಯೇ ಆಗಲಿ ಅಥವಾ ಅನ್ಯಥಾ ಅವನನ್ನು ವಿಮೋಚನೆಗೊಳಿಸುವವರೆಗೆ;

(ಇ) ಅವನನ್ನು ಮ್ಯಾಜಿಸ್ಟ್ರೇಟನು ಬಂದೀಖಾನೆಗೆ ಒಪ್ಪಿಸಿದ ದಿನಾಂಕದಿಂದ ಹದಿನೈದು ದಿವಸಗಳು ಮುಕ್ತಾಯವಾಗುವವರೆಗೆ

- ವಿದೇಶಿ ರಾಜ್ಯಕ್ಕೆ ಒಪ್ಪಿಸತಕ್ಕದ್ದಲ್ಲ ಅಥವಾ ಹಿಂತಿರುಗಿಸತಕ್ಕದ್ದಲ್ಲ

(2) (1)ನೇ ಉಪಪ್ರಕರಣದ ಉದ್ದೇಶಗಳಿಗಾಗಿ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅಪರಾಧಗಳನ್ನು, ರಾಜಕೀಯ ಸ್ವರೂಪದ ಅಪರಾಧಗಳೆಂದು ಪರಿಗಣಿಸತಕ್ಕದ್ದಲ್ಲ.

(3) ಯಾವುದೇ ವಿದೇಶೀ ರಾಜ್ಯದೊಂದಿಗೆ ಭಾರತವು ಮಾಡಿಕೊಂಡ ಪ್ರತ್ಯರ್ಪಣ ಕೌಲನ್ನು ಪರಿಗಣನೆಗೆ ತೆಗೆದುಕೊಂಡು ಕೇಂದ್ರ ಸರ್ಕಾರವು, ಅಧಿಸೂಚಿಸಿದ ಆದೇಶದ ಮೂಲಕ, ಅನುಸೂಚಿಯಲ್ಲಿ ಕೊಟ್ಟಿರುವ ಪಟ್ಟಿಗೆ ಯಾವುದೇ ಅಪರಾಧವನ್ನು ಸೇರಿಸಬಹುದು ಅಥವಾ ಆ ಪಟ್ಟಿಯಿಂದ ಯಾವುದೇ ಅಪರಾಧವನ್ನು ಬಿಟ್ಟುಬಿಡಬಹುದು.

**32. 29 ಮತ್ತು 31ನೇ ಪ್ರಕರಣಗಳು ಅವುಗಳಲ್ಲಿ ಯಾವುದೇ ಮಾರ್ಪಾಟು ಇಲ್ಲದೆ ಅನ್ವಯವಾಗತಕ್ಕದ್ದು.**- 3ನೇ ಪ್ರಕರಣ ಅಥವಾ 12ನೇ ಪ್ರಕರಣದಲ್ಲಿ ತದ್ವಿರುದ್ಧವಾಗಿ ಏನೇ ಇದ್ದರೂ, 29 ಮತ್ತು 31ನೇ ಪ್ರಕರಣಗಳ ಉಪಬಂಧಗಳು ಯಾವುದೇ ಮಾರ್ಪಾಟು ಇಲ್ಲದೆ ಪ್ರತಿಯೊಂದು ವಿದೇಶೀ ರಾಜ್ಯಕ್ಕೆ ಅನ್ವಯವಾಗತಕ್ಕದ್ದು.

**33. ಅಧಿನಿಯಮವು, ವಿದೇಶೀಯರ ಅಧಿನಿಯಮ, 1946ಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.**- ಈ ಅಧಿನಿಯಮದಲ್ಲಿರುವುದು ಯಾವುದೂ, ವಿದೇಶೀಯರ ಅಧಿನಿಯಮ, 1946 (1946ರ 31)ರ ಉಪಬಂಧಗಳು ಅಥವಾ ಅದರ ಮೇರೆಗೆ ಮಾಡಿದ ಯಾವುದೇ ಆದೇಶಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**34. ರಾಜ್ಯಕ್ಷೇತ್ರಾತೀತ ಅಧಿಕಾರ ವ್ಯಾಪ್ತಿ.**- ವಿದೇಶೀ ರಾಜ್ಯದಲ್ಲಿ ಯಾರೇ ವ್ಯಕ್ತಿಯು ಮಾಡಿದ ಪ್ರತ್ಯರ್ಪಣ ಅಪರಾಧವನ್ನು ಭಾರತದಲ್ಲಿ ಮಾಡಿದ್ದೆಂದು ಭಾವಿಸತಕ್ಕದ್ದು ಮತ್ತು ಅಂಥ ವ್ಯಕ್ತಿಯು ಅಂಥ ಅಪರಾಧಕ್ಕಾಗಿ ಭಾರತದಲ್ಲಿ ಪ್ರಾಸಿಕ್ಯೂಷನ್‌ಗೆ ಗುರಿಯಾಗತಕ್ಕುದು.

**34ಎ. ಪ್ರತ್ಯರ್ಪಣಕ್ಕೆ ನಿರಾಕರಿಸಿದಾಗ ಪ್ರಾಸಿಕ್ಯೂಷನ್.**- ಪರಾರಿ ಅಪರಾಧಿಯನ್ನು, ವಿದೇಶೀ ರಾಜ್ಯವು ಪ್ರತ್ಯರ್ಪಣಕ್ಕಾಗಿ ಮಾಡಿಕೊಂಡ ಕೋರಿಕೆಯ ಅನುಸಾರ ವಶಕ್ಕೆ ಒಪ್ಪಿಸಲಾಗದೆಂದು ಅಥವಾ ಹಿಂದಿರುಗಿಸಲಾಗದೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟಲ್ಲಿ, ಅದು, ಯುಕ್ತವೆಂದು ಆಲೋಚಿಸಬಹುದಾದಂತೆ, ಭಾರತದಲ್ಲಿ ಅಂಥ ಪರಾರಿ ಅಪರಾಧಿಯನ್ನು ಪ್ರಾಸಿಕ್ಯೂಟ್ ಮಾಡಲು ಕ್ರಮ ತೆಗೆದುಕೊಳ್ಳಬಹುದು.

**34ಬಿ. ತಾತ್ಕಾಲಿಕ ದಸ್ತಗಿರಿ.**- (1) ಪರಾರಿ ಅಪರಾಧಿಯನ್ನು ತತ್‌ಕ್ಷಣ ದಸ್ತಗಿರಿ ಮಾಡಬೇಕೆಂದು ವಿದೇಶೀ ರಾಜ್ಯದಿಂದ ತುರ್ತು ಕೋರಿಕೆ ಬಂದ ಮೇಲೆ, ಕೇಂದ್ರ ಸರ್ಕಾರವು, ಅಂಥ ಪರಾರಿ ಅಪರಾಧಿಯ ದಸ್ತಗಿರಿಗಾಗಿ ತಾತ್ಕಾಲಿಕ ವಾರಂಟನ್ನು ನೀಡುವುದಕ್ಕೆ ಸಕ್ಷಮ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮ್ಯಾಜಿಸ್ಟ್ರೇಟನನ್ನು ಕೋರಬಹುದು.

(2) (1)ನೇ ಉಪ ಪ್ರಕರಣದ ಮೇರೆಗೆ ದಸ್ತಗಿರಿಯಾದ ಪರಾರಿ ಅಪರಾಧಿಯನ್ನು, ಅವನ ದಸ್ತಗಿರಿಯ ದಿನಾಂಕದಿಂದ ಅರವತ್ತು ದಿನಗಳು ಮುಕ್ತಾಯವಾದ ಮೇಲೆ, ಸದರಿ ಅವಧಿಯೊಳಗೆ ಅವನನ್ನು ವಶಕ್ಕೆ ಒಪ್ಪಿಸುವುದಕ್ಕಾಗಿ ಅಥವಾ ಹಿಂತಿರುಗಿಸುವುದಕ್ಕಾಗಿ ಯಾವುದೇ ಕೋರಿಕೆಯನ್ನು ಸ್ವೀಕರಿಸದಿದ್ದರೆ, ವಿಮೋಚನೆಗೊಳಿಸತಕ್ಕುದು.

**34ಸಿ. ಮರಣ ದಂಡನೆ ಬದಲು ಆಜೀವ ಕಾರಾವಾಸದ ಉಪಬಂಧ.**- ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಭಾರತದಲ್ಲಿ ಮರಣ ದಂಡನೆಯಿಂದ ದಂಡನೀಯವಾದ ಪ್ರತ್ಯರ್ಪಣ ಅಪರಾಧವನ್ನು ಮಾಡಿದ ಪರಾರಿ ಅಪರಾಧಿಯನ್ನು ಕೇಂದ್ರ ಸರ್ಕಾರದ ಕೋರಿಕೆ ಮೇರೆಗೆ ವಿದೇಶೀ ರಾಜ್ಯವು ವಶಕ್ಕೆ ಒಪ್ಪಿಸಿದ್ದರೆ ಅಥವಾ ಹಿಂತಿರುಗಿಸಿದ್ದರೆ ಮತ್ತು ಆ ವಿದೇಶೀ ರಾಜ್ಯದ ಕಾನೂನುಗಳಲ್ಲಿ ಅಂಥ ಅಪರಾಧಕ್ಕಾಗಿ ಮರಣ ದಂಡನೆ ಉಪಬಂಧವು ಇಲ್ಲದಿದ್ದರೆ, ಅಂಥ ಪರಾರಿ ಅಪರಾಧಿಯು ಆ ಅಪರಾಧಕ್ಕಾಗಿ ಆಜೀವ ಕಾರಾವಾಸದ ದಂಡನೆಗೆ ಮಾತ್ರ ಗುರಿಯಾಗತಕ್ಕದ್ದು.

**35. ಅಧಿಸೂಚಿಸಿದ ಆದೇಶಗಳು ಮತ್ತು ಅಧಿಸೂಚನೆಗಳನ್ನು ಸಂಸತ್ತಿನ ಮುಂದೆ ಇಡತಕ್ಕದ್ದು.**- ಈ ಅಧಿನಿಯಮದ ಮೇರೆಗೆ ಮಾಡಿದ ಪ್ರತಿಯೊಂದು ಅಧಿಸೂಚಿತ ಆದೇಶವನ್ನು ಅಥವಾ ಹೊರಡಿಸಿದ ಅಧಿಸೂಚನೆಯನ್ನು, ಅದನ್ನು ಮಾಡಿದ ಅಥವಾ ಹೊರಡಿಸಿದ ತರುವಾಯ ಆದಷ್ಟು ಬೇಗ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕುದು.

**36. ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಕ್ಕಾಗಿ ಉಪಬಂಧಿಸಬಹುದು, ಎಂದರೆ,–

(ಎ) ಪರಾರಿ ಅಪರಾಧಿಯನ್ನು ವಶಕ್ಕೆ ಒಪ್ಪಿಸಬೇಕೆಂಬ ಕೋರಿಕೆಯನ್ನು ಮಾಡಿಕೊಳ್ಳಬಹುದಾದ ನಮೂನೆ;

(ಬಿ) IIIನೇ ಅಧ್ಯಾಯವು ಅನ್ವಯವಾಗುವಂಥ ವಿದೇಶಿ ರಾಜ್ಯದಲ್ಲಿ ಯಾರೇ ವ್ಯಕ್ತಿಯ ದಸ್ತಗಿರಿಗಾಗಿ ವಾರಂಟನ್ನು ಹೊರಡಿಸಬಹುದಾದಂಥ ನಮೂನೆ;

(ಸಿ) ಈ ಅಧಿನಿಯಮದ ಮೇರೆಗೆ ಯಾವುದೇ ವಾರಂಟನ್ನು ಹಿಂಬರಹ ಮಾಡಬಹುದಾದ ಅಥವಾ ಅಧಿಪ್ರಮಾಣ ಮಾಡಬಹುದಾದಂಥ ರೀತಿ;

(ಡಿ) ಈ ಅಧಿನಿಯಮದ ಮೇರೆಗೆ ಆಪಾದಿತನಾದ ಅಥವಾ ಅಭಿರಕ್ಷೆಯಲ್ಲಿರುವ ಪರಾರಿ ಅಪರಾಧಿಗಳ ಸ್ಥಳಾಂತರಣ ಮತ್ತು ವಾರಂಟಿನಲ್ಲಿ ಅವರನ್ನು ಸ್ವೀಕರಿಸಲು ಹಕ್ಕುಳ್ಳವರಾಗಿರುವರೆಂದು ಹೆಸರಿಸಲಾದ ವ್ಯಕ್ತಿಗಳಿಗೆ ಅವರನ್ನು ಒಪ್ಪಿಸುವಂಥ ಕಾಲದವರೆಗೆ ಅವರ ನಿಯಂತ್ರಣ ಮತ್ತು ಪೋಷಣೆ;

(ಇ) ಈ ಅಧಿನಿಯಮವು ಅನ್ವಯವಾಗುವಂಥ ಯಾವುದೇ ಆರೋಪಿತ ಅಪರಾಧದ ವಿಷಯವಾಗಿರುವ ಅಥವಾ ಅದರ ರುಜುವಾತಿಗಾಗಿ ಅಗತ್ಯವಾಗಿರುವ ಯಾವುದೇ ಸ್ವತ್ತಿನ ಅಭಿಗ್ರಹಣ ಮತ್ತು ವಿಲೆ;

(ಎಫ್) ಯಾವ ನಮೂನೆಯಲ್ಲಿ ಅಥವಾ ರೀತಿಯಲ್ಲಿ ಅಥವಾ ಯಾರ ಮೂಲಕ ಮ್ಯಾಜಿಸ್ಟ್ರೇಟನು ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರಕ್ಕೆ ವರದಿಯನ್ನು ಮಾಡಲು ಅವನನ್ನು ಅಗತ್ಯಪಡಿಸಬಹುದೋ ಆ ನಮೂನೆ ಮತ್ತು ರೀತಿ ಅಥವಾ ವ್ಯಕ್ತಿ;

(ಜಿ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದಂಥ ಯಾವುದೇ ಇತರ ವಿಷಯ;

(3) ಈ ಪ್ರಕರಣದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಗಾಗಿ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ನಿರಂತರವಾಗಿ ಬರುವ ಅಧಿವೇಶನಗಳ ನಿಕಟತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಎರಡೂ ಸದನಗಳು ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಒಪ್ಪಿದರೆ, ಅಥವಾ ಆ ನಿಯಮವನ್ನು ರಚಿಸ ಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಸಂದರ್ಭಾನುಸಾರ ಆ ನಿಯಮವು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿ ಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ. ಆದಾಗ್ಯೂ, ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿರುವ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**37. ನಿರಸನ ಮತ್ತು ಉಳಿಸುವಿಕೆಗಳು.–** (1) ಭಾರತ ಪ್ರತ್ಯರ್ಪಣ ಅಧಿನಿಯಮ, 1903 (1903ರ 15) ಮತ್ತು 1956ರ ನವೆಂಬರ್ ಒಂದನೇ ದಿವಸಕ್ಕೆ ನಿಕಟ ಪೂರ್ವದಲ್ಲಿ 'ಬಿ' ಭಾಗದ ರಾಜ್ಯಗಳಲ್ಲಿ ಒಳಗೊಂಡಿದ್ದಂಥ ರಾಜ್ಯಕ್ಷೇತ್ರಗಳಲ್ಲಿ ಈ ಅಧಿನಿಯಮದ ಪ್ರಾರಂಭದಲ್ಲಿ ಜಾರಿಯಲ್ಲಿದ್ದ ಅದಕ್ಕೆ ಸಂವಾದಿಯಾದ ಯಾವುದೇ ಕಾನೂನು ಮತ್ತು ಈಶಾನ್ಯ ಗಡಿನಾಡು ಏಜೆನ್ಸಿ ಮತ್ತು ತುಯೆನ್‌ಸಾಂಗ್ ಜಿಲ್ಲಾ (ಪ್ರತ್ಯರ್ಪಣ) ರೆಗ್ಯುಲೇಷನ್, 1961 (1961ರ 3) ಇವುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) 1870 ರಿಂದ 1932ರ ವರೆಗಿನ ಪ್ರತ್ಯರ್ಪಣ ಅಧಿನಿಯಮಗಳು ಮತ್ತು ಪರಾರಿ ಅಪರಾಧಿಗಳ ಅಧಿನಿಯಮ, 1881 ಅವುಗಳು ಭಾರತಕ್ಕೆ ಅನ್ವಯವಾಗುವ ಮತ್ತು ಅದರ ಕಾನೂನಿನ ಭಾಗವೆಂಬಂತೆ ಪ್ರವರ್ತಿಸುವಷ್ಟರ ಮಟ್ಟಿಗೆ ಅವುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ. (33 ಮತ್ತು 34 ವಿಕ್ಟೋರಿಯಾ ಸಿ. 52; 36 ಮತ್ತು 37 ವಿಕ್ಟೋರಿಯಾ (ಸಿ) 60. 6 ಅಡ್ವಿನ್, 7ಸಿ. 615, 22 ಮತ್ತು 23 ಜಾರ್ಜ್; 5. ಸಿ. 39. 44 ಮತ್ತು 45 ವಿಕ್ಟೋರಿಯಾ (ಸಿ. 69.)

**ಅನುಸೂಚಿ**

**[ಪ್ರಕರಣ 31 (2) ಅನ್ನು ನೋಡಿ]**

**ರಾಜಕೀಯ ಸ್ವರೂಪದ ಅಪರಾಧಗಳೆಂದು ಪರಿಗಣಿಸಕೂಡದ ಅಪರಾಧಗಳು**

ಈ ಮುಂದಿನ ಅಪರಾಧಗಳ ಪಟ್ಟಿಯನ್ನು, ಆಪಾದಿಸಲಾದ ಅಪರಾಧದ ದಿನಾಂಕದಂದು ಭಾರತದಲ್ಲಿ ಜಾರಿಯಲ್ಲಿರುವ ಕಾನೂನಿಗೆ ಅನುಸಾರವಾಗಿ ಅರ್ಥೈಸಬೇಕು. ಸಂಬಂಧಪಟ್ಟ ಅಧಿನಿಯಮಗಳ ಹೆಸರುಗಳನ್ನು ಕೊಟ್ಟಿರದಿದ್ದರೆ, ಉಲ್ಲೇಖಿಸಿದ ಪ್ರಕರಣಗಳು, ಭಾರತ ದಂಡ ಸಂಹಿತೆ (1860ರ 45)ಯ ಪ್ರಕರಣಗಳಾಗಿರುತ್ತವೆ:–

1. ಅಪಹರಣ ನಿರೋಧ ಅಧಿನಿಯಮ, 1982 (1982ರ 65)ರ ಮೇರೆಗಿನ ಅಪರಾಧಗಳು.
2. ಸಿವಿಲ್ ವಿಮಾನಯಾನ ಸುರಕ್ಷೆ ವಿರುದ್ಧ ಕಾನೂನುಬಾಹಿರ ಚಟುವಟಿಕೆಗಳ ದಮನ ಅಧಿನಿಯಮ, 1982 (1982ರ 66)ರ ಮೇರೆಗಿನ ಅಪರಾಧಗಳು.
3. ರಾಜತಾಂತ್ರಿಕ ಏಜೆಂಟರೂ ಸೇರಿದಂತೆ, ಅಂತರಾಷ್ಟ್ರೀಯವಾಗಿ ಸಂರಕ್ಷಿತ ವ್ಯಕ್ತಿಗಳ ವಿರುದ್ಧದ ಅಪರಾಧಗಳಿಗೆ ದಂಡನೆ ಕುರಿತು ಡಿಸೆಂಬರ್ 14, 1973 ರಂದು ನ್ಯೂಯಾರ್ಕ್‌ನಲ್ಲಿ ಸಹಿಮಾಡಿದ ಒಡಂಬಡಿಕೆಯ ವ್ಯಾಪ್ತಿಗೊಳಪಡುವ ಅಪರಾಧ.
4. ಒತ್ತೆಯಾಳುಗಳನ್ನಾಗಿ ಮಾಡಿಕೊಳ್ಳುವುದರ ವಿರುದ್ಧ ಡಿಸೆಂಬರ್ 18, 1979ರಂದು ನ್ಯೂಯಾರ್ಕ್‌ನಲ್ಲಿ ಸಹಿಮಾಡಿದ ಅಂತರಾಷ್ಟ್ರೀಯ ಒಡಂಬಡಿಕೆಯ ವ್ಯಾಪ್ತಿಗೊಳಪಡುವ ಅಪರಾಧ.
5. ಆಪರಾಧಿಕ ನರಹತ್ಯೆ, ಕೊಲೆ (299 ರಿಂದ 304ರ ವರೆಗಿನ ಪ್ರಕರಣಗಳು).
6. ಮಾರಕ ಆಯುಧಗಳಿಂದ ಅಥವಾ ಸಾಧನಗಳಿಂದ ಸ್ವಯಿಚ್ಛೆಯಿಂದ ಗಾಯ ಅಥವಾ ತೀವ್ರ ಗಾಯವುಂಟು ಮಾಡುವುದು (321 ರಿಂದ 333ರ ವರೆಗಿನ ಪ್ರಕರಣಗಳು).
7. ಸ್ಫೋಟಕ ವಸ್ತುಗಳ ಅಧಿನಿಯಮ, 1908 (1908ರ 6)ರ ಮೇರೆಗಿನ ಅಪರಾಧಗಳು.
8. ಪ್ರಾಣಾಪಾಯವನ್ನುಂಟುಮಾಡುವ ಉದ್ದೇಶದಿಂದ ಬಂದೂಕುಗಳನ್ನು ಅಥವಾ ಮದ್ದುಗುಂಡುಗಳನ್ನು ಹೊಂದಿರುವುದು (ಆಯುಧಗಳ ಅಧಿನಿಯಮ, 1959 (1959ರ 54)ರ 27ನೇ ಪ್ರಕರಣ).
9. ದಸ್ತಗಿರಿಗೆ ಅಥವಾ ಬಂಧನಕ್ಕೆ ಅಡ್ಡಿ ಮಾಡುವ ಅಥವಾ ತಡೆಯುವ ಉದ್ದೇಶದಿಂದ ಬಂದೂಕನ್ನು ಬಳಸುವುದು [ಆಯುಧಗಳ ಅಧಿನಿಯಮ, 1959 (1959ರ 54)ರ 28ನೇ ಪ್ರಕರಣ].
10. ಪ್ರಾಣಾಪಾಯವನ್ನುಂಟು ಮಾಡುವ ಉದ್ದೇಶದಿಂದ, ಸಾರ್ವಜನಿಕ ಉಪಯುಕ್ತತೆಗಳಿಗೆ ಅಥವಾ ಅನ್ಯಥಾ ಬಳಸಿದ ಸ್ವತ್ತಿಗೆ ನಷ್ಟ ಅಥವಾ ಹಾನಿಯುಂಟು ಮಾಡುವುದು (440ನೇ ಪ್ರಕರಣದನ್ವಯ 425ನೇ ಪ್ರಕರಣ).
11. ಅಕ್ರಮ ಪ್ರತಿಬಂಧ ಮತ್ತು ಅಕ್ರಮ ಬಂಧನ (339 ರಿಂದ 348ರ ವರೆಗಿನ ಪ್ರಕರಣಗಳು).
12. ಒತ್ತೆಯಾಳುಗಳನ್ನಾಗಿ ಮಾಡಿಕೊಳ್ಳುವುದೂ ಸೇರಿದಂತೆ, ಅಪಹರಣ ಮತ್ತು ಬಲಾತ್ ಅಪಹರಣ (359 ರಿಂದ 369ರ ವರೆಗಿನ ಪ್ರಕರಣಗಳು).

13. ಭಯೋತ್ಪಾದಕತೆ ಮತ್ತು ಭಯೋತ್ಪಾದಕ ಕೃತ್ಯಗಳಿಗೆ ಸಂಬಂಧಿಸಿದ ಅಪರಾಧಗಳು (ಭಯೋತ್ಪಾದಕ ಮತ್ತು ವಿಚ್ಛಿದ್ರಕಾರಕ ಚಟುವಟಿಕೆಗಳ (ಪ್ರತಿಬಂಧಕ) ಅಧಿನಿಯಮ, 1987 (1987ರ 28).

14. ದುಷ್ಪ್ರೇರಣೆ ಮಾಡುವುದು, ಒಳಸಂಚು ಮಾಡುವುದು, ಮಾಡಲು ಪ್ರಯತ್ನಿಸುವುದು, ಪ್ರಚೋದಿಸುವುದು, ಮೇಲೆ ಪಟ್ಟಿ ಮಾಡಲಾದ ಅಪರಾಧಗಳಲ್ಲಿ ಯಾವುದೇ ಅಪರಾಧವನ್ನು ಮಾಡುವಿಕೆಯಲ್ಲಿ ಸಹಾಯಕನಾಗಿ ಭಾಗವಹಿಸುವುದು.

●* * * *